18 ಸೆಪ್ಟೆಂಬರ್ 2025 ಗುರುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 190 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ


ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ





ಚಂಡೀಗಢ್‌ನಲ್ಲಿ ಬುಧವಾರ ಆಸ್ಟ್ರೇಲಿಯಾ ವನಿತೆಯ ವಿರುದ್ಧ ನಡೆದ 2ನೇ ಏಕದಿನ ಪಂದ್ಯದಲ್ಲಿ ಶತಕ (117 ರನ್) ಗಳಿಸಿದ ಭಾರತದ ಸ್ಮೃತಿ ಮಂದನಾ... ಭಾರತಕ್ಕೆ 102 ರನ್ ಗೆಲುವು...

ಸಂತುಲಿತ ಜೀವನಕ್ಕೆ ಪ್ರವಾದಿ ಮುಹಮ್ಮದರ(ಸ) ಮಾರ್ಗದರ್ಶನ » 2



ಚುನಾವಣಾ ಆಯೋಗದಿಂದ ಹೊಸ ಬದಲಾವಣೆ » 3



ವಿಶ್ವ ಚಾಂಪಿಯನ್ ಶಿಪ್ ಫೈನಲ್‌ಗೆ ಚೋಪ್ರಾ » 4

# ಪಾಲಿಕೆ ಮೇಯರ್ ಪಟ್ಟ ಪಡೆದ ಗಿರೀಶ್ ಚನ್ನವೀರಪ್ಪ

## ಆಕಾಂಕ್ಷಿಗಳ ಮನವೊಲಿಕೆ ಬಳಿಕ ಅವಿರೋಧ ಆಯ್ಕೆ | ಅಂತರ ಕಾಯ್ದುಕೊಂಡು ತಟಸ್ಥವಾಗಿ ಉಳಿದ ಬಿಜೆಪಿ ಸದಸ್ಯರು

• ಪ್ರಜೋದಯ ವರದಿ

**ಹಾಸನ:** ಮೇಯರ್ ಪಟ್ಟಕ್ಕಾಗಿ ಅವಿಶ್ವಾಸ ಮಂಡನೆ, ವಿಪ್ ಉಲ್ಲಂಘನೆ-ಸದಸ್ಯತ್ವ ಅನರ್ಹ ಪ್ರಹಸನದ ಬಳಿಕ ಹಾಸನ ಮಹಾನಗರ ಪಾಲಿಕೆ ನೂತನ ಮೇಯರ್ ಗಾದಿಗೆ 8ನೇ ವಾರ್ಡ್‌ನ ಜೆಡಿಎಸ್ ಸದಸ್ಯ ಗಿರೀಶ್ ಚನ್ನವೀರಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದುಳಿದ ವರ್ಗ (ಎ)ಕ್ಕೆ ಮೀಸಲಾಗಿದ್ದ ಮೇಯರ್ ಸ್ಥಾನಕ್ಕೆ ಜೆಡಿಎಸ್ ವರಿಷ್ಠರ ತೀರ್ಮಾನದಂತೆ ಗಿರೀಶ್ ಚನ್ನವೀರಪ್ಪ ಅವರು ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಚುನಾವಣಾಧಿಕಾರಿ ಮೈಸೂರು ವಿಭಾಗೀಯ ಪ್ರಭಾರಿ ಪ್ರಾದೇಶಿಕ ಆಯುಕ್ತ ವೆಂಕಟರಾಜ ಅವರು ಬುಧವಾರ ಮಧ್ಯಾಹ್ನ ಅವಿರೋಧ ಆಯ್ಕೆ ಘೋಷಿಸಿದರು.

ಮೇಯರ್ ಆಯ್ಕೆ ವೇಳೆ ಶಾಸಕ ಹೆಚ್.ಪಿ.ಸ್ವರೂಪ್, ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ, ಉಪ ಮೇಯರ್ ಹೇಮಲತಾ ಕಮಲ್ ಕುಮಾರ್, ಜೆಡಿಎಸ್ ಸದಸ್ಯರು ಹಾಜರಿದ್ದರು. ಜೆಡಿಎಸ್ ಮೈತ್ರಿ ಪಕ್ಷ ಬಿಜೆಪಿ ಸದಸ್ಯರು ಚುನಾವಣಾ ಪ್ರಕ್ರಿಯೆ ಯಿಂದ



ಹೊರಗುಳಿದು ತಟಸ್ಥ ನಿಲುವು ತಾಳಿದರು. ಕಾಂಗ್ರೆಸ್ ಸದಸ್ಯರು ಕೂಡ ಗೈರಾಗಿದ್ದರು. ಮೇಯರ್ ಘೋಷಣೆಯಾಗುತ್ತಿದ್ದಂತೆ ಪಾಲಿಕೆ ಹೊರಭಾಗದಲ್ಲಿ ಜೆಡಿಎಸ್ ಕಾರ್ಯಕರ್ತರು ಮತ್ತು ಗಿರೀಶ್ ಚನ್ನವೀರಪ್ಪ ಅವರ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

**ಅನರ್ಹತೆ ಕಾರಣಕ್ಕೆ ಚುನಾವಣೆ**

ಹಾಸನ ಮಹಾನಗರ ಪಾಲಿಕೆಯಾಗಿ ಏಪ್ರಿಲ್ 28 ರಂದು ರಾಜ್ಯ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಿ ಘೋಷಣೆ ಮಾಡಿತ್ತು. ನಗರಸಭೆ ಅಧ್ಯಕ್ಷರಾಗಿದ್ದ ಚಂದ್ರೇಗೌಡ ಅವರು ಮಹಾನಗರ ಪಾಲಿಕೆಯ ಮೊದಲ ಮೇಯರ್ ಆಗಿ ಕಾರ್ಯ ನಿರ್ವಹಿಸಿದರು. ಪಕ್ಷದ ಆಂತರಿಕ ಒಪ್ಪಂದದಂತೆ ಅಧ್ಯಕ್ಷ ಸ್ಥಾನ ಬಿಟ್ಟುಕೊಡದ ಹಿನ್ನಲೆ ಅವಿಶ್ವಾಸ ಮಂಡನೆ ಮಾಡಲಾಗಿತ್ತು. ಈ ವೇಳೆ ಬಿಜೆಪಿ ಸದಸ್ಯರ ನೆರವು ಪಡೆದುಕೊಂಡು ಅವರು ಅಧಿಕಾರ ಉಳಿಸಿಕೊಂಡಿದ್ದರು. ವಿಪ್ ಉಲ್ಲಂಘಿಸಿದ ಆರೋಪದಡಿ ಚಂದ್ರೇಗೌಡ ಅವರನ್ನು ಆ.16 ರಂದು ಅನರ್ಹಗೊಳಿಸಲಾಗಿತ್ತು. ಈ ಹಿನ್ನಲೆ ಉಪ ಮೇಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಂತಹ ಹೇಮಲತಾ ಕಮಲ್ ಕುಮಾರ್ ಅವರು ಪ್ರಭಾರಿ ಮೇಯರ್ ಆಗಿ ಅಧಿಕಾರ ವಹಿಸಿಕೊಂಡು ಒಂದು ತಿಂಗಳ ಕಾಲ ಕಾರ್ಯನಿರ್ವಹಿಸಿದರು.

**ಅಧಿಕಾರದ ಅವಧಿ 1 ತಿಂಗಳು..?**

ಮಹಾನಗರ ಪಾಲಿಕೆಯ ಆಡಳಿತದ ಅವಧಿ ಇನ್ನು ಕೇವಲ ಒಂದು ತಿಂಗಳು ಬಾಕಿ ಉಳಿದಿದೆ. ಅ.16ಕ್ಕೆ ಅಧಿಕಾರವಧಿ ಮುಕ್ತಾಯವಾಗಲಿದ್ದು, ಅ.17ರಿಂದ ಮೈಸೂರಿನ ಪ್ರಾದೇಶಿಕ ಆಯುಕ್ತರು ಆಡಳಿತ ಅಧಿಕಾರಿಯಾಗಿ ನೇಮಕಗೊಳ್ಳಲಿದ್ದಾರೆ ಎನ್ನಲಾಗಿದೆ. ಒಂದು ವೇಳೆ ಚುನಾವಣಾ ಆಯೋಗ ಸ್ಥಳೀಯ ಸಂಸ್ಥೆಗಳ

» ನಾಲ್ಕನೇ ಪುಟದಲ್ಲಿ

### ಅಲ್ಪಾವಧಿಯಲ್ಲೇ ಉತ್ತಮ ಕೆಲಸ ಮಾಡುವೆ




ಹಾಸನ: ತಾಳಿದವನು ಬಾಳಿಯಾನು ಎಂಬ ಗಾದೆ ಮಾತಿನಂತೆ ತಾಳ್ಮೆಯಿಂದ ಕಾದಿದ್ದಕ್ಕೆ ನನಗೆ ಈಗ ಮೇಯರ್ ಸ್ಥಾನ ಸಿಕ್ಕಿದೆ. ಈ ಹಿಂದೆ ನನಗೆ ಅಧಿಕಾರ ಸಿಗಬೇಕಾಗಿತ್ತು. ಆದರೆ ಚಂದ್ರೇಗೌಡ ಅವರು ರಾಜೀನಾಮೆ ನೀಡಲಿಲ್ಲ, ಆದ್ದರಿಂದ ತಡವಾಗಿದೆ. ನನಗೆ ಸಿಕ್ಕಿರುವ ಅಲ್ಪ ಅವಧಿಯಲ್ಲಿ ಉತ್ತಮ ಕೆಲಸ ಮಾಡುತ್ತೇನೆಂದು ನೂತನ ಮೇಯರ್ ಗಿರೀಶ್ ಚನ್ನವೀರಪ್ಪ ಅವರು ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಪಕ್ಷದ ನಾಯಕರ ಸೂಚನೆಯಂತೆ ನಾನು ಮೇಯರ್ ಆಗಿ ಅವಿರೋಧ ಆಯ್ಕೆಯಾಗಿದ್ದೇನೆ. ಇದಕ್ಕೆ ಸಹಕಾರ ನೀಡಿದ ಮಾಜಿ ಸಚಿವ ಹೆಚ್.ಡಿ.ರೇವಣ್ಣ, ಶಾಸಕ ಹೆಚ್.ಪಿ.ಸ್ವರೂಪ್, ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಸೇರಿ, ನನ್ನನ್ನು ಗೆಲ್ಲಿಸಿರುವ 8ನೇ ವಾರ್ಡ್ ಜನತೆಗೆ ಕೃತಜ್ಞತೆ ಸಲ್ಲಿಸುತ್ತೇನೆ. ಪಾಲಿಕೆಯಲ್ಲಿ ಏನೆಲ್ಲಾ ಕೆಲಸ ಮಾಡ ಬೇಕೆಂಬ ಬಗ್ಗೆ ನನ್ನದೇ ಆದ ಕನಸುಗಳಿವೆ. ಪಕ್ಷದ ನಾಯಕರು, ಶಾಸಕರು ಹಾಗು ಸದಸ್ಯರ ವಿಶ್ವಾಸ ಪಡೆದು ಅಭಿವೃದ್ಧಿ ಕಾಮಗಾರಿ ಮಾಡುವೆ, ಜನರಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುವೆ ಎಂದರು.

# ಬೆಳೆ ನಷ್ಟ ಪರಿಹಾರ: ಜಂಟಿ ಸಮೀಕ್ಷೆಗೆ ಸಿದ್ದರಾಮಯ್ಯ ಸೂಚನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ಭಾರೀ ಮಳೆಯಿಂದ ಹಾನಿಗೀಡಾಗಿರುವ ಬೆಳೆ ನಷ್ಟಕ್ಕೆ ಪರಿಹಾರ ವಿತರಿಸಲು ಕಂದಾಯ ಮತ್ತು ಕೃಷಿ ಇಲಾಖೆಗಳಿಂದ ಜಂಟಿ ಸಮೀಕ್ಷೆ ನಡೆಸಿ ವರದಿ ಆಧರಿಸಿ ಮುಂದಿನ ಕ್ರಮ ಕೈ ಗೊಳ್ಳಲಾಗುವುದೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದಿಂದ ಬೆಳೆ ಸಾಲ ಮನ್ನಾ ಬಗ್ಗೆ ಮುಂದಿನ ದಿನಗಳಲ್ಲಿ ಪರಿಶೀಲಿಸುತ್ತೇವೆ. ಮೊದಲು ಬೆಳೆ ನಷ್ಟಕ್ಕೆ ಪರಿಹಾರ ನೀಡಬೇಕು. ಆದ್ದರಿಂದ ಕಂದಾಯ ಮತ್ತು ಕೃಷಿ ಇಲಾಖೆಗಳಿಗೆ ಜಂಟಿ ಸಮೀಕ್ಷೆ ನಡೆಸಲು ಸೂಚನೆ ನೀಡಿದ್ದೇನೆ. ಒಂದು ವಾರದಲ್ಲಿ ಜಂಟಿ ಸಮೀಕ್ಷೆ ನಡೆಯಲಿದೆ. ನಂತರ ಬೆಳೆ ನಷ್ಟ ಪರಿಹಾರ ವಿತರಿಸಲಾಗುವುದೆಂದರು.

ಅತಿವೃಷ್ಟಿ ಪೀಡಿತ ಪ್ರದೇಶಗಳ ಜಂಟಿ ಸಮೀಕ್ಷೆ ಮುಗಿಯುತ್ತಿದ್ದಂತೆ, ಅಧಿಕಾರಿಗಳು ತಕ್ಷಣ ಕಾರ್ಯಪ್ರವೃತ್ತರಾಗಿ ಬೆಳೆ ಹಾನಿಗೆ ಸಮರ್ಪಕವಾಗಿ ಪರಿಹಾರ ತಲುಪಿಸಬೇಕು. ಮಾನವ- ಜಾನುವಾರು ಜೀವ ಹಾನಿಗಳಿಗೆ ಶೇ.100 ರಷ್ಟು ಪರಿಹಾರ ಒದಗಿಸಿ



ರುವ ರೀತಿಯಲ್ಲೇ ಬೆಳೆ ಹಾನಿಗೂ ಒದಗಿಸುತ್ತೇವೆಂದರು.

ವಾಡಿಕೆಗಿಂತ ಶೇ. 17 ರಷ್ಟು ಮಳೆ ಹೆಚ್ಚಾಗಿದೆ. 37 ಜನರ ಜೀವ ಹಾನಿ, 175 ಜಾನುವಾರುಗಳ ಪ್ರಾಣ ಹಾನಿ, ಮನೆ ಹಾನಿಯಾಗಿರುವ ಎಲ್ಲಾ ಪ್ರಕರಣಗಳಲ್ಲೂ ಪರಿಹಾರ ನೀಡಲಾಗಿದೆ ಎಂದರು.

ವಿಮೆ ಇಲ್ಲದ ರೈತರಿಗೆ ಪರಿಹಾರ ನೀಡಲಾಗುತ್ತದೆಯೇ ಎಂಬ ಪ್ರಶ್ನೆಗೆ, ನಾವು ಚರ್ಚಿಸಿ ಪರಿಗಣಿಸುತ್ತೇವೆ. ಎನ್‌ಡಿಆರ್‌ಎಫ್ ಮಾನದಂಡಗಳ ಅಡಿಯಲ್ಲಿ ಹೆಚ್ಚಿನ ಪರಿಹಾರಕ್ಕಾಗಿ ಹಲವು ಬಾರಿ ದೆಹಲಿಗೆ ಭೇಟಿ ನೀಡಿದ್ದೇನೆ. ಪ್ರಧಾನಿ ನರೇಂದ್ರ ಮೋದಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿ ಮಾಡಿದ್ದೇನೆ. ಕೇಂದ್ರ ಸರ್ಕಾರ ಪ್ರತಿಕ್ರಿಯಿಸುತ್ತಿಲ್ಲ. ಏನು ಮಾಡಬೇಕೆಂದು ಖಾರವಾಗಿ ಪ್ರಶ್ನಿಸಿದರು.

# ಜಿಲ್ಲೆಯಲ್ಲಿ ಮೈತ್ರಿ ದಿಗ್ಭ್ರಮೆ ತರಿಸಿದೆ: ಸೂರಜ್

• ಪ್ರಜೋದಯ ವರದಿ

**ಹಾಸನ :** ಜೆಡಿಎಸ್-ಬಿಜೆಪಿ ಮೈತ್ರಿ ದೊಡ್ಡ ಮಟ್ಟದಲ್ಲಿ ನಡೆದಿದೆ. ಬಿಜೆಪಿಯನ್ನು ನಾವು ರಾಷ್ಟ್ರೀಯ ಪಕ್ಷವಾಗಿ ಗೌರವಿಸುತ್ತೇವೆ. ಆದರೆ, ಸ್ಥಳೀಯ ರಾಜಕಾರಣದಲ್ಲಿ ಕೆಲವು ಗೊಂದಲಗಳಿರುವುದು ದಿಗ್ಭ್ರಮೆ ಮೂಡಿಸಿದೆ ಎಂದು ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ಅವಿಶ್ವಾಸ ಗೊತ್ತುವಳಿ ಸಂದರ್ಭದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನವರು ಮೈತ್ರಿ ಮಾಡಿ ಕೊಂಡಿದ್ದರು. ಆದರೆ, ಇಂದಿನ ಸಭೆಗೆ ಆ ಎರಡು ಪಕ್ಷದ ಸದಸ್ಯರು ಆಗಮಿಸಿರಲಿಲ್ಲ. ಸಂಸದರು ಮತ್ತು ಮಾಜಿ ಶಾಸಕ ಪ್ರೀತಮ್ ಗೌಡ ಅವರು ಒಟ್ಟಿಗೆ ಇರುತ್ತಾರೆ. ಗಣೇಶೋತ್ಸವದಂತಹ ಸಂದರ್ಭಗಳಲ್ಲಿ ಬಿಜೆಪಿ ಮಾಜಿ ಶಾಸಕರು ಮತ್ತು ಕಾಂಗ್ರೆಸ್ ಸಂಸದರು ಒಟ್ಟಿಗೆ ಕುಣಿಯುತ್ತಾರೆ, ಜೈಕಾರ ಹಾಕುತ್ತಾರೆ. ಅದನ್ನು ಯಾವ ರೀತಿ ವಿಶ್ಲೇಷಿಸುವುದು ಎಂದು ಪ್ರಶ್ನಿಸಿದರು.

**ಪಕ್ಷವಿರೋಧಿ ಚಟುವಟಿಕೆಗೆ ತಕ್ಕ ಪಾಠ**

ಒಬ್ಬರು ಮೋಸ ಮಾಡಿದ್ದರಿಂದ ಎಲ್ಲರಿಗೂ ಅನ್ಯಾಯವಾಗುತ್ತಿತ್ತು. ಈಗ ಕಾನೂನು ಮೂಲಕ ಪಕ್ಷ



ವಿರೋಧಿ ಚಟುವಟಿಕೆ ನಡೆಸಿದವರಿಗೆ ತಕ್ಕ ಪಾಠ ಕಲಿಸಲಾಗಿದೆ. ಕಳೆದ ಬಾರಿ ಅವಿಶ್ವಾಸ ಗೊತ್ತುವಳಿ ಸಂದರ್ಭದಲ್ಲಿ ಕೆಲ ಗೊಂದಲಗಳಿಂದ ಹಿನ್ನಡೆ ಯಾಗಿತ್ತು. ಆದರೀಗ ಕಾನೂನು ಹೋರಾಟದಲ್ಲಿ ಗೆದ್ದು ನಮ್ಮ ಪಕ್ಷದ ಗಿರೀಶ್ ಚನ್ನವೀರಪ್ಪ ಅವರನ್ನು ಮೇಯರ್ ಆಗಿ ಆಯ್ಕೆ ಮಾಡಲಾಗಿದೆ ಎಂದರು.

ಈ ಹಿಂದೆ ಮೇಯರ್ ಆಗಿದ್ದ ಎಂ.ಚಂದ್ರೇಗೌಡ ಅವರ ಮೇಲೆ ಯಾವುದೇ ವೈಯಕ್ತಿಕ ದ್ವೇಷವಿಲ್ಲ. ಹಿಂದುಳಿದ ಸಮುದಾಯಕ್ಕೆ ಅಧಿಕಾರ ಹಂಚಿಕೆ ಮಾಡುವ ಉದ್ದೇಶದಿಂದ ಅವರನ್ನು ಕೆಳಗಿಳಿಸಿ ಎಲ್ಲರಿಗೂ ಅವಕಾಶ ಮಾಡಿಕೊಡಲು ಚಿಂತನೆ ನಡೆಸಿದ್ದವು. ಆದರೆ, ಅವರು ಪಕ್ಷದ ವಿರುದ್ಧವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಜೊತೆ ಸೇರಿ ಅವಿಶ್ವಾಸದಲ್ಲಿ ಗೆದ್ದಿದ್ದರು, ಕಾನೂನು ಹೋರಾಟದಲ್ಲಿ ನಮಗೆ ಗೆಲುವಾಗಿದೆ. ಈ ಹಿನ್ನಲೆ ಗಿರೀಶ್ ಚನ್ನವೀರಪ್ಪ ಅವರನ್ನು ಮೇಯರ್ ಆಗಿ ಆಯ್ಕೆ ಮಾಡಲಾಗಿದೆ. ಮುಂದೆ ಅವಕಾಶ ಸಿಕ್ಕರೆ ಉಳಿದ ಸದಸ್ಯರಿಗೂ ಕೂಡ ಅವಕಾಶ ಮಾಡಿಕೊಡಲಾಗುವುದೆಂದು ಹೇಳಿದರು.

### ಪಕ್ಷ ವಿರೋಧಿ ಚಟುವಟಿಕೆ ನಡೆದಿಲ್ಲ: ಸ್ವರೂಪ್

ಹಾಸನ: ಮೇಯರ್ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಯಾವುದೇ ರೀತಿಯ ಪಕ್ಷ ವಿರೋಧಿ ಚಟುವಟಿಕೆ ನಡೆಯಲಿಲ್ಲ. ಆದರೆ, ಬಿಜೆಪಿಯವರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲಿಲ್ಲವೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಿಂದೆ ಚಂದ್ರೇಗೌಡರನ್ನು ಅಧ್ಯಕ್ಷರನ್ನಾಗಿ ಮಾಡಿದ್ದು ಇದೇ ಜೆಡಿಎಸ್ ಪಕ್ಷ. ಬಿಜೆಪಿ ಸದಸ್ಯರಿಗೆ ಉಪಾಧ್ಯಕ್ಷ ಸ್ಥಾನ ನೀಡಿದ್ದೆವು. ಆದರೆ, ಅವರು ಒಪ್ಪಂದದಂತೆ ಅಧಿಕಾರ ಬಿಟ್ಟು ಕೊಡದಿದ್ದಾಗ ಅವಿಶ್ವಾಸ ನಿರ್ಣಯ ಮಂಡಿಸಿದ್ದೆವು. ಆಗ ಬಿಜೆಪಿ-ಕಾಂಗ್ರೆಸ್ ಸಹಕಾರ ಪಡೆದು ಮೇಯರ್ ಆಗುವ ಮೂಲಕ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದರು. ಇದರ ವಿರುದ್ಧ ನಾವು ಕೋರ್ಟ್ ಮೊರೆ ಹೋದಾಗ ನಮಗೆ ನ್ಯಾಯ ಸಿಕ್ಕಿತ್ತು ಎಂದರು.

# ಎಂಸಿಇ ಅಧ್ಯಕ್ಷರಾಗಿ ಬಿ.ಆರ್.ಗುರುದೇವ್

## ಅಶೋಕ್ ಹಾರನಹಳ್ಳಿ ಬಣಕ್ಕೆ ಗೆಲುವು | ಆರ್.ಟಿ.ದ್ಯಾವೇಗೌಡರ ಬಣಕ್ಕೆ ಹಿನ್ನಡೆ

• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷರಾಗಿ ಮಾಜಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ ಬಣದ ಬಿ.ಆರ್. ಗುರುದೇವ್ ಅವರು ಆಯ್ಕೆಯಾಗಿದ್ದು, ಆರ್.ಟಿ.ದ್ಯಾವೇಗೌಡ ಅವರ ಬಣಕ್ಕೆ ತೀವ್ರ ಹಿನ್ನಡೆಯಾಗಿದೆ.

ಸಂಸ್ಥೆಯ ಆಡಳಿತ ಮಂಡಳಿ ಕಾರ್ಯದರ್ಶಿಯಾಗಿ ನಗರಸಭೆ ಮಾಜಿ ಅಧ್ಯಕ್ಷ ಜಿ.ಟಿ.ಕುಮಾರ್, ಖಜಾಂ ಚಿಯಾಗಿ ಎಸ್. ಜಿ.ಶ್ರೀಧರ್ ಅವರು ಆಯ್ಕೆ ಯಾಗಿದ್ದಾರೆ.

ಸೆ.8 ರಂದು ನಡೆದ ಅವಿಶ್ವಾಸ ನಿರ್ಣಯ ಸಭೆಯಲ್ಲಿ ನಡಾವಳಿ ಪುಸ್ತಕಕ್ಕೆ ಹಾರನಹಳ್ಳಿ ಅಶೋಕ್ ಬಣದ ನಿರ್ದೇಶಕರು ಸಹಿ ಹಾಕದ ಹಿನ್ನಲೆಯಲ್ಲಿ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ, ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್, ಖಜಾಂಚಿ ಪಾರ್ಶ್ವನಾಥ್ ಅವರು ವಿಶ್ವಾಸ ಮತ ಪಡೆಯುವಲ್ಲಿ ವಿಫಲವಾಗಿರುವುದರಿಂದ ತಮ್ಮ ಹುದ್ದೆಗಳಲ್ಲಿ ಮುಂದುವರೆಯುವಂತಿಲ್ಲ. ಹಾಗೆಯೇ ಅವರು ಮಾಡಿದ ಯಾವ ಆದೇಶಗಳನ್ನು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಮಾನ್ಯ ಮಾಡು ವಂತಿಲ್ಲವೆಂದು ಸಹಕಾರ ಸಂಘಗಳ ಉಪ ನಿಬಂಧಕರು ಆದೇಶಿಸಿದ್ದಾರೆ. ಆ ಮೂಲಕ ಹಲವು ದಿನ ಗಳಿಂದ



ನಡೆಯುತ್ತಿದ್ದ ಎಂಟಿಇಎಸ್ ಅಧ್ಯಕ್ಷ ಗಾದಿ ಹಗ್ಗ ಜಗ್ಗಾಟಕ್ಕೆ ತೆರೆ ಬಿದ್ದಿದೆ.

**ಆರ್.ಟಿ.ಡಿ. ವಿರುದ್ಧ ಮುನಿಸು**

2025 ಜನವರಿ 10 ರಂದು ಎಂಟಿಇಎಸ್ ಅಧ್ಯಕ್ಷ ರಾಗಿ ಆರ್.ಟಿ.ದ್ಯಾವೇಗೌಡ ಅವರು ಆಯ್ಕೆಯಾಗಿ ದ್ದರು. ಹಲವು ದಶಕಗಳಿಂದ ಎಂಟಿಇಎಸ್ ಅಧ್ಯಕ್ಷ ರಾಗಿ ಸಂಸ್ಥೆಯಲ್ಲಿ ಹಿಡಿತ ಸಾಧಿಸಿದ್ದ ಅಶೋಕ್ ಹಾರನಹಳ್ಳಿ ಅವರ ಅಧಿಪತ್ಯ ಮುಗಿದು ಹೊಸ ಶಕೆ ಆರಂಭವಾಯಿತು ಎಂಬ ನಿರೀಕ್ಷೆ ಮೂಡಿತ್ತು. ಕೇವಲ 9 ತಿಂಗಳಲ್ಲಿ ನಿರೀಕ್ಷೆ ಹುಸಿಯಾಗಿದ್ದು, 24 ನಿರ್ದೇಶಕರಲ್ಲೇ ಒಮ್ಮತ ಮೂಡದೆ ಅ ವಿಶ್ವಾಸ ನಿರ್ಣಯದವರೆಗೆ ಬಂದು ನಿಂತಿತ್ತು. ಮಲೆನಾಡು ತಾಂತ್ರಿಕ ಕಾಲೇಜು ಸಿಬ್ಬಂದಿ ನೇಮಕ ವಿಚಾರದಲ್ಲಿ ಭ್ರಷ್ಟಾಚಾರ ನಡೆದಿದೆ, ಹಿರಿಯ ನಿರ್ದೇಶಕರಿಗೆ ಗೌರವ ಕೊಡುತ್ತಿಲ್ಲವೆಂಬ ವಿಚಾರ ಮುಂದಿಟ್ಟುಕೊಂಡು ಅಶೋಕ್ ಹಾರನಹಳ್ಳಿ ಅವರ ನೇತೃತ್ವದ 13 ನಿರ್ದೇಶಕರು ಆರ್.ಟಿ. ದ್ಯಾವೇಗೌಡರ ವಿರುದ್ಧ ಮುನಿಸು ತೋರಿದ್ದರು.

**ಅಮಾನತಿಗೆ ಆಕ್ರೋಶ**

ಸಂಸ್ಥೆಯ ನಿಯಮ ಉಲ್ಲಂಘನೆ ಆರೋಪದಡಿ ನಿರ್ದೇಶಕರಾದ ಡಾ||

» ನಾಲ್ಕನೇ ಪುಟದಲ್ಲಿ

### ಎಂಟಿಇಎಸ್: ಅಧ್ಯಕ್ಷರ ಕೊಠಡಿಗೆ ಬೀಗ

ಹಾಸನ: ಮಲೆನಾಡು ತಾಂತ್ರಿಕ ಶಿಕ್ಷಣ ಸಮಿತಿ ಅಧ್ಯಕ್ಷರಾಗಿ ಬಿ.ಆರ್. ಗುರುದೇವ್ ಅವರು ಸಹಕಾರ ಸಂಘಗಳ ಉಪನಿಬಂಧಕರ ಆದೇಶದಂತೆ ಆಯ್ಕೆ ಯಾಗಿದ್ದರೂ ಬುಧವಾರ ಅಧಿಕಾರ ಸ್ವೀಕಾರ ಸಾಧ್ಯವಾಗಲಿಲ್ಲ. ಆದೇಶ ಪ್ರತಿ ಕೈ ಸೇರುತ್ತಿದ್ದಂತೆ ಅಶೋಕ್ ಹಾರನಹಳ್ಳಿ ಅವರ ಬಣದ ಎಲ್ಲಾ ನಿರ್ದೇಶಕರು ಮಲೆನಾಡು ತಾಂತ್ರಿಕ ಕಾಲೇಜಿನತ್ತ ದೌಡಾಯಿಸಿ ಬಂದರು. ಆದರೆ, ಅಧ್ಯಕ್ಷರ ಕೊಠಡಿಗೆ ಬೀಗ ಹಾಕಲಾಗಿತ್ತು. ಸ್ವಲ್ಪ ಹೊತ್ತು ಕಾದರೂ ಯಾರೂ ಬಾರದಿರುವುದರಿಂದ ವಾಪಾಸ್ಸಾಗಬೇಕಾಯಿತು.

ಎಂಟಿಇಎಸ್ ನೂತನ ಅಧ್ಯಕ್ಷ ಬಿ.ಆರ್.ಗುರುದೇವ್ ಅವರು ಮಾತನಾಡಿ, ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಬಹುಮತಕ್ಕೆ ಮಾನ್ಯತೆ ಇದೆ. ಅದೇ ರೀತಿ ನಾವು ಬಹುಮತ ಪಡೆದು ಅವಿಶ್ವಾಸ ನಿರ್ಣಯದಲ್ಲಿ ಅಧಿಕಾರ ಸ್ವೀಕಾರಕ್ಕೆ ಹೋದಾಗ ಅವರು ನ್ಯಾಯಾಲಯ ಮೆಟ್ಟಿಲೇರಿದ್ದರು. ಬಹುಮತ ಆಧಾರದಡಿ ನಾವೇ ಆಡಳಿತ ನಡೆಸ ಬೇಕೆಂದು ತೀರ್ಪು ಬಂದಿದೆ. ಅಧ್ಯಕ್ಷರ ಕೊಠಡಿಗೆ ಬೀಗ ಹಾಕಿದ್ದಾರೆ. ಪೊಲೀಸರ ಮೂಲಕ ಬೀಗ ತೆಗೆಸಿ ಗುರುವಾರ ಅಧಿಕಾರ ಸ್ವೀಕರಿಸುತ್ತೇವೆಂದರು.



# ಮೃತರ ಕುಟುಂಬಕ್ಕೆ ತಲಾ 1 ಲಕ್ಷ ರೂ. ನೆರವು



• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಮೊಸಳೆಹೊಸಳ್ಳಿಯಲ್ಲಿ ಇತ್ತೀಚೆಗೆ ಸಂಭವಿಸಿದ ಕ್ಯಾಂಟರ್ ದುರಂತದಲ್ಲಿ ಮೃತರ ಕುಟುಂಬಸ್ಥರಿಗೆ ಸಂಸದ ಶ್ರೇಯಸ್ ಪಟೇಲ್ ಅವರು ತಲಾ 1 ಲಕ್ಷ ರೂ. ಪರಿಹಾರ ವಿತರಿಸಿದರು.

ಕಟ್ಟಾಯ ಹೋಬಳಿ ಶಿವಯ್ಯನ ಕೊಪ್ಪಲು ಗ್ರಾಮದ ಚಂದನ್, ಹೊಳೆನರಸೀಪುರ ತಾಲ್ಲೂಕು ಬಂಟರಹಳ್ಳಿಯ ಪ್ರಭಾಕರ್ ಅವರ ಮನೆಗೆ ತೆರಳಿ ಸಾಂತ್ವನ ಹೇಳಿದರು. ದುರಂತದಲ್ಲಿ ಮೃತಪಟ್ಟ ಕುಟುಂಬಕ್ಕೆ 1 ಲಕ್ಷ ರೂ. ಹಾಗು ಗಾಯಾಳುಗಳಿಗೆ 25 ಸಾವಿರ ರೂ. ನೀಡುವುದಾಗಿ ಸಂಸದರು ಘೋಷಿಸಿದ್ದಾರೆ.

ಶ್ರೇಯಸ್ ಅವರು ಮಾತನಾಡಿ, ಅಪಘಾತದಲ್ಲಿ ಮೃತಪಟ್ಟವರ ಮನೆಗೆ ತೆರಳಿ ವೈಯಕ್ತಿಕವಾಗಿ 1 ಲಕ್ಷ ರೂ. ಪರಿಹಾರ ನೀಡಿದ್ದೇನೆ. ಹೋದ ಜೀವಕ್ಕೆ ಬೆಲೆ ಕಟ್ಟಲು ಆಗುವುದಿಲ್ಲ. ನೋವಿನಲ್ಲಿರುವ ಕುಟುಂಬಗಳಿಗೆ ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ದೇವರಲ್ಲಿ ಪ್ರಾರ್ಥಿಸುವೆ ಎಂದರು.

# ರೈತರ ಸಾಲ ಮನ್ನಾಕ್ಕೆ ನಿಖಿಲ್ ಒತ್ತಾಯ

• ಪ್ರಜೋದಯ ವರದಿ

**ಬೆಂಗಳೂರು:** ನೆರೆಹಾನಿ ಪ್ರದೇಶಗಳ ರೈತರು, ಸಂತ್ರಸ್ತರ ಸಮಸ್ಯೆಗಳಿಗೆ ಸ್ಪಂದಿಸುವ ಸಲುವಾಗಿ ರಾಜ್ಯ ಪ್ರವಾಸ ಕೈಗೊಳ್ಳುವುದಾಗಿ ಜೆಡಿಎಸ್ ಪಕ್ಷದ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ಬುಧವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಾದ್ಯಂತ ಭಾರೀ ಮಳೆ ಮತ್ತು ಪ್ರವಾಹದಿಂದ ವ್ಯಾಪಕ ಬೆಳೆ ಹಾನಿ ಸಂಭವಿಸಿದ್ದು, ರಾಜ್ಯ ಸರ್ಕಾರ ರೈತರ ಸಾಲ ಮನ್ನಾ ಮಾಡಬೇಕು. ಈ ಹಿನ್ನೆಲೆಯಲ್ಲಿ ನೆರೆ ಸಂತ್ರಸ್ತರ ಸಮಸ್ಯೆ ಆಲಿಸಲು ಜೆಡಿಎಸ್ ವತಿಯಿಂದ ರಾಜ್ಯ ಪ್ರವಾಸ ಕೈಗೊಳ್ಳಲಾಗಿದ್ದು, ಬೆಳೆ ಹಾನಿ, ಮನೆ ಕುಸಿತ ಪ್ರದೇಶ ಗಳಿಗೆ ಭೇಟಿ ನೀಡಿ ವಸ್ತು ಸ್ಥಿತಿ ವರದಿ ಯನ್ನು ರಾಜ್ಯ ಸರ್ಕಾರಕ್ಕೆ ನೀಡಲಿದ್ದೇವೆಂದು ಹೇಳಿದ್ದಾರೆ.

# ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಮತ ಪತ್ರ : ಕಾನೂನಿನಂತೆ ಚುನಾವಣೆ

• ಪ್ರಜೋದಯ ವರದಿ

**ಬೆಂಗಳೂರು :** ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಮತ ಪತ್ರ ಕಡ್ಡಾಯಗೊಳಿಸಿ ಸರ್ಕಾರ ಕಾನೂನು ತಂದರೆ ನಾವು ಅದೇ ರೀತಿ ಚುನಾವಣೆ ಮಾಡಬೇಕಾಗುತ್ತದೆ ಎಂದು ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್.ಸಂಗ್ರೇಶಿ ಅವರು ಹೇಳಿದರು.



ಬುಧವಾರ ಸುದ್ದಿಗಾರರೊಂದಿಗೆ ಬುಧವಾರ ಮಾತನಾಡಿದ ಅವರು, ಮತಪತ್ರ ಅಥವಾ ವಿದ್ಯುನ್ಮಾನ ಮತ ಯಂತ್ರದ (ಇವಿಎಂ) ಮೂಲಕ ಚುನಾವಣೆ ನಡೆಸಬಹುದೆಂಬುದು ಕಾಯ್ದೆಯಲ್ಲೇ ಇದೆ. ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಳಂಬ ಆಗುತ್ತಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಯಬೇಕಿದೆ. ವಿಳಂಬಕ್ಕೆ ನಾವು ಕಾರಣ ಅಲ್ಲ, ಸರ್ಕಾರದಿಂದ ಮೀಸಲಾತಿ ಪಟ್ಟಿ ಬರಬೇಕಿದೆ ಎಂದರು.

188 ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಯ ಅವಧಿ ಅಕ್ಟೋಬರ್‌ನಲ್ಲಿ ಮುಗಿಯಲಿದೆ. ಅವುಗಳಿಗೂ ಚುನಾವಣೆ ನಡೆಸಬೇಕಿದೆ. ಮೀಸಲಾತಿ ಪಟ್ಟಿಯನ್ನು ಸರ್ಕಾರ ಏಕೆ ಕೊಟ್ಟಿಲ್ಲ ಎಂಬುದು ಅರ್ಥ ಆಗಿಲ್ಲ. ಎರಡು ವಾರಗಳ ಹಿಂದೆ ಹೈಕೋರ್ಟ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆ ವಿಷಯ ವಿಚಾರಣೆಗೆ ಬಂದಿತ್ತು. ಕ್ಷೇತ್ರ ಪುನರ್ ವಿಂಗಡಣೆ ಮಾಡಬೇಕಿದೆ ಎಂದು ಕೋರ್ಟ್‌ಗೆ ಸರ್ಕಾರ ಹೇಳಿದೆ. ನಂತರ ಚುನಾವಣೆ ನಡೆಯಲಿದೆ ಎಂದರು.

# ಟ್ರಕ್ ದುರಂತ : ಎಸ್‌ಪಿ ಅಮಾನತಿಗೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಮೊಸಳೆಹೊಸಳ್ಳಿ ಟ್ರಕ್ ದುರಂತಕ್ಕೆ ಪೊಲೀಸರ ನಿರ್ಲಕ್ಷ್ಯವೇ ಕಾರಣ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ, ಅಮಾನತುಗೊಳಿಸದಿದ್ದರೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುವುದಾಗಿ ಬಿಜೆಪಿ ಮುಖಂಡ, ವಕೀಲ ದೇವರಾಜೇಗೌಡ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೊಳೆನರಸೀಪುರ ಕ್ಷೇತ್ರದ ಮೊಸಳೆಹೊಸಳ್ಳಿ ಗ್ರಾಮ ಮೂರು ಪಕ್ಷಗಳ ರಾಜಕೀಯ ಜಿದ್ದಾಜಿದ್ದಿನ ಕೇಂದ್ರವಾಗಿದ್ದು, ಪೈಪೋಟಿಗಿಳಿದು ಗಣಪತಿ ಉತ್ಸವ ನಡೆಸಲಾಗುತ್ತದೆ. ಹೀಗಾಗಿ ಆ ಭಾಗದಲ್ಲಿ ಹೆಚ್ಚಿನ ನಿಗಾ ವಹಿಸಬೇಕಾಗಿದ್ದು, ಪೊಲೀಸ್ ಇಲಾಖೆ ಜವಾಬ್ದಾರಿ.




ನಿರ್ಲಕ್ಷ್ಯ ವಹಿಸಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗೆ ಪತ್ರ ಬರೆದಿದ್ದೇನೆ. ಅವರು ಕ್ರಮ ಕೈಗೊಳ್ಳದಿದ್ದರೆ ಹೈಕೋರ್ಟ್ ಮೆಟ್ಟಿಲೇರುವುದಾಗಿ ಹೇಳಿದರು.

ಬೆಂಗಳೂರಿನಲ್ಲಿ ಆರ್‌ಸಿಬಿ ವಿಜಯೋತ್ಸವ ಮೆರವಣಿಗೆ ವೇಳೆ ನಡೆದ ಕಾಲ್ತುಳಿತದಲ್ಲಿ ಕ್ರಿಕೆಟ್ ಅಭಿಮಾನಿಗಳು ಮೃತಪಟ್ಟಿದ್ದಕ್ಕೆ ಪೊಲೀಸರ ನಿರ್ಲಕ್ಷ್ಯವೇ ಕಾರಣವೆಂದು ಸರ್ಕಾರ ಅಧಿಕಾರಿಗಳನ್ನು ಅಮಾನತು ಮಾಡಿತ್ತು. ಅದೇ ರೀತಿ ಸರ್ಕಾರಕ್ಕೆ ನೈತಿಕತೆ ಇದ್ದರೆ ಮೊಸಳೆಹೊಸಳ್ಳಿ ದುರ್ಘಟನೆಗೆ ಕಾರಣವಾದ ಎಸ್‌ಪಿ, ಎಎಸ್‌ಪಿ, ಡಿವೈಎಸ್‌ಪಿ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಟ್ರಕ್ ದುರಂತಕ್ಕೆ ಸರ್ಕಾರವೇ ಹೊಣೆ ಹೊರಬೇಕು. ಜಿಲ್ಲೆಯಲ್ಲಿ ಎಲ್ಲಿಯೂ ಸಹ ಸಂಚಾರಿ ನಿಯಮ ಪಾಲನೆಯಾಗುತ್ತಿಲ್ಲ. ಟ್ರಾಫಿಕ್ ಸಿಗ್ನಲ್‌ಗಳು ಕೆಟ್ಟು ನಿಂತಿವೆ. ಚಾಲಕರು ಕುಡಿದು ವಾಹನ ಚಲಾಯಿಸುತ್ತಿದ್ದರೂ ಟ್ರಾಫಿಕ್ ಪೊಲೀಸರು ತಪಾಸಣೆ ನಡೆಸುತ್ತಿಲ್ಲ. ಈ ಎಲ್ಲಾ ಜವಾಬ್ದಾರಿ ನಿರ್ವಹಣೆ ಮಾಡಬೇಕಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಫಲರಾಗಿದ್ದಾರೆ. ಸರ್ಕಾರ ಎಸ್‌ಪಿಯನ್ನು ಕೂಡಲೇ ಅಮಾನತುಗೊಳಿಸಿ, ಮೃತರ ಕುಟುಂಬಕ್ಕೆ 50 ಲ.ರೂ., ಹಾಗು ಗಾಯಾಳುಗಳ ಕುಟುಂಬಕ್ಕೆ 25 ಲ.ರೂ. ಪರಿಹಾರ ನೀಡಬೇಕೆಂದು ಆಗ್ರಹಿಸಿದರು.

# ಬಾಕಿ ರಸಗೊಬ್ಬರ ಪೂರೈಕೆಗೆ ಸುರ್ಜೇವಾಲ ಒತ್ತಾಯ

• ಪ್ರಜೋದಯ ವರದಿ

**ಬೆಂಗಳೂರು :** ಕೇಂದ್ರ ಸರ್ಕಾರ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಗೆ ರಾಜ್ಯಕ್ಕೆ ಪೂರೈಸಬೇಕಿದ್ದ 3.36 ಲಕ್ಷ ಮೆಟ್ರಿಕ್ ಟನ್ ಯೂರಿಯಾ ರಸಗೊಬ್ಬರ ಇನ್ನೂ ಬಾಕಿ ಇದೆ. ಆದಷ್ಟು ಶೀಘ್ರವಾಗಿ ಅದನ್ನು ಪೂರೈಸಲು ಕ್ರಮ ಕೈಗೊಳ್ಳುವಂತೆ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಒತ್ತಾಯಿಸಿದ್ದಾರೆ.

# ರಾಷ್ಟ್ರ ನಿರ್ಮಾಣದಲ್ಲಿ ವಿಶ್ವಕರ್ಮರ ಕೊಡುಗೆ ಅಪಾರ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರ ನಿರ್ಮಾಣದಲ್ಲಿ ವಿಶ್ವಕರ್ಮರು ವಹಿಸಿದ ಪಾತ್ರ ಅತ್ಯಮೂಲ್ಯವಾಗಿದ್ದು, ಅವರು ಹಾಕಿಕೊಟ್ಟ ಮಾರ್ಗದಲ್ಲಿ ಯುವ ಸಮಾಜ ಸಾಗಬೇಕಿದೆ ಎಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಬುಧವಾರ ಆಯೋಜಿಸಿದ್ದ ವಿಶ್ವಕರ್ಮ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ದೇವಾನು ದೇವತೆಗಳ ಅನುಗ್ರಹದಿಂದ ವಿಶ್ವಕರ್ಮರು ಅಗಾಧ ಸಾಧನೆ ಮೆರೆದಿದ್ದಾರೆ. ವಿಶ್ವಕರ್ಮರನ್ನು ಪ್ರಪಂಚದ ಶ್ರೇಷ್ಠ ದೇವರಿಗೆ ಹೋಲಿಸಲಾಗುತ್ತದೆ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಶಾಸಕ ಹೆಚ್.ಪಿ. ಸ್ವರೂಪ್ ಅವರು, ಕ್ಷೇತ್ರ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರ 25 ಕೋ.ರೂ. ಅನುದಾನ ನೀಡಿದೆ. ಅದರಲ್ಲಿ ಮೊದಲು ವಿಶ್ವಕರ್ಮ ಸಮುದಾಯದ ಮಕ್ಕಳಿಗೆ ಅನುಕೂಲವಾಗುವ ದೃಷ್ಟಿಯಿಂದ ವಸತಿ ನಿಲಯ ಹಾಗು ಸಮುದಾಯ ಭವನ ನಿರ್ಮಾಣಕ್ಕೆ 25 ಲಕ್ಷ ರೂ. ನೀಡುತ್ತೇನೆ. ಈಗಾಗಲೇ ಜಕಣಾಚಾರಿ ವೃತ್ತವೆಂದು ರಸ್ತೆಗೆ ನಾಮಕರಣ ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಅವರ ಪ್ರತಿಮೆಗೆ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾ ಕುಮಾರಿ ಮಾತನಾಡಿ, ಜಗತ್ತಿಗೆ ರೂಪ ಕೊಟ್ಟವರು ವಿಶ್ವಕರ್ಮ ಸಮುದಾಯದವರು. ಇಂದು ಜಗತ್ತನ್ನು ಸುಂದರೀಕರಣ ಮಾಡುವ ದೈವಿಕಲೆ ಹೊಂದಿರುವ ಮಹಾನುಭಾವರ ಹೆಸರಿನಲ್ಲಿ ಜಯಂತಿ ಆಚರಿಸುತ್ತಿರುವುದು ಹೆಮ್ಮೆಯ ವಿಚಾರ. ನಮ್ಮ ನೆಲದ ಸಂಸ್ಕೃತಿ, ಪ್ರಪಂಚದ ಸೌಂದರ್ಯ ಸುಂದರವಾಗಿರಲು ವಿಶ್ವಕರ್ಮ ಸಮಾಜದವರು ಕಾರಣಕರ್ತರಾಗಿದ್ದಾರೆ. ಈ ಸಮುದಾಯದವರ ಕೊಡುಗೆ ಅಪಾರವಾಗಿದೆ. ಇಂದು ವಿಶ್ವಕರ್ಮ ಜಯಂತಿ ಒಂದು ಸಮುದಾಯಕ್ಕೆ ಮಾತ್ರ ಸೀಮಿತವಲ್ಲ. ಇಡೀ ಪ್ರಪಂಚಕ್ಕೆ ಅವರ ಕೊಡುಗೆ ಬಹಳಷ್ಟಿದೆ ಎಂದರು.

ಸಮುದಾಯದ ಶ್ರೀ ಶಿವ ಚಂದ್ರಶೇಖರ ಸ್ವಾಮೀಜಿ ಅವರು ಮಾತನಾಡಿ, ಬಹಳ ಶ್ರೇಷ್ಠ ಹಾಗು ವಿಶೇಷವಾದದ್ದು ವಿಶ್ವಕರ್ಮದವರು ಮಾಡುವ ಕೆಲಸ. ಜೊತೆಗೆ ಶ್ರೇಷ್ಠ

» ನಾಲ್ಕನೇ ಪುಟದಲ್ಲಿ

# ಸಿಐಟಿಯು ರಾಜ್ಯ ಸಮ್ಮೇಳನ ಲಾಂಛನ ಬಿಡುಗಡೆ




• ಪ್ರಜೋದಯ ವರದಿ

**ಹಾಸನ:** ಕಾರ್ಮಿಕರ ಹಕ್ಕು, ಜನ ಸಾಮಾನ್ಯರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ ಸಿಐಟಿಯು 16ನೇ ರಾಜ್ಯ ಸಮ್ಮೇಳನ ನ.13 ರಿಂದ 15ವರೆಗೆ ಮೂರು ದಿನಗಳ ಕಾಲ ನಡೆಯಲಿದೆ. ಈ ಸಂಬಂಧ ನಗರದ ಶ್ರಮ ಕಚೇರಿಯಲ್ಲಿ ಸ್ವಾಗತ ಸಮಿತಿ ಹಮ್ಮಿಕೊಂಡಿದ್ದ ಸಭೆಯಲ್ಲಿ ಸಮ್ಮೇಳನದ ಅಧಿಕೃತ ಲಾಂಛನವನ್ನು ಬಿಡುಗಡೆ ಮಾಡಲಾಯಿತು.

ಸಭೆಯಲ್ಲಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು, ಕಾರ್ಮಿಕ ವರ್ಗದ ಪರಿಸ್ಥಿತಿ ಅತ್ಯಂತ ಚಿಂತಾಜನಕವಾಗಿದೆ. ಅದರಲ್ಲೂ ಅಸಂಘಟಿತ ಕಾರ್ಮಿಕರಿಗೆ ಕನಿಷ್ಠ ಕೂಲಿ ಇಲ್ಲದೆ ಬದುಕು ನಡೆಸಲಾಗದ ಪರಿಸ್ಥಿತಿಗೆ ತಲುಪುತ್ತಿದ್ದಾರೆ. ಅದಕ್ಕೆ ಕಾರಣವಾಗಿರುವ ನೀತಿಗಳ

» ನಾಲ್ಕನೇ ಪುಟದಲ್ಲಿ

C M Y K

# ಸಂತುಲಿತ ಜೀವನಕ್ಕೆ ಪ್ರವಾದಿ ಮುಹಮ್ಮದರ(ಸ) ಮಾರ್ಗದರ್ಶನ

ಒಮ್ಮೆ ಪ್ರವಾದಿ ಮುಹಮ್ಮದರ(ಸ) ಮನೆಗೆ ಮೂವರು ಸಹಚರರು ಬಂದರು. ಪ್ರವಾದಿಯವರ ಜೀವನದ ಬಗ್ಗೆ ಕೇಳಿ ತಿಳಿದುಕೊಳ್ಳುವುದು ಅವರ ಉದ್ದೇಶವಾಗಿತ್ತು. ಅವರ ಅನುಪಸ್ಥಿತಿಯಲ್ಲಿ ಮಾತೆ ಆಯಿಷರೊಂದಿಗೆ ಪ್ರವಾದಿಯವರು ಯಾವ ರೀತಿ ನಮಾಝ್ ಮಾಡುತ್ತಾರೆ ಉಪವಾಸ ಇರುತ್ತಾರೆ ಮತ್ತು ಜೀವನದ ಇತರ ಕೆಲಸಗಳ ಬಗ್ಗೆ ಕೇಳಿ ತಿಳಿದುಕೊಂಡ ಬಳಿಕ ಮನೆಗೆ ಮರಳುವ ಮುನ್ನ ಅವರ ಪೈಕಿ ಓರ್ವ ವ್ಯಕ್ತಿ ನಾನು ಇನ್ನು ಮುಂದೆ ಪ್ರತಿದಿನ ಉಪವಾಸದಿಂದ ಇರುತ್ತೇನೆ ಉಪವಾಸವನ್ನು ತೊರೆಯುವುದಿಲ್ಲ ಎಂದು ತೀರ್ಮಾನಿಸುತ್ತಾನೆ. ಇನ್ನೋರ್ವ ವ್ಯಕ್ತಿ ನಾನು ಇನ್ನು ಮುಂದೆ ಸದಾ ಹಗಲು ರಾತ್ರಿ ನಮಾಝ್ ನಿರ್ವಹಿಸುತ್ತಿರುತ್ತೇನೆ ಎನ್ನುತ್ತಾನೆ. ಮೂರನೆಯ ವ್ಯಕ್ತಿ ನಾನು ವಿವಾಹ ಮಾಡಿಕೊಳ್ಳುವುದಿಲ್ಲ ಎಂದು ತೀರ್ಮಾನಿಸುತ್ತಾನೆ. ವೈವಾಹಿಕ ಜೀವನದಿಂದ ಅವನ ಆರಾಧನೆಗಳಿಗೆ ತೊಡಕು ಉಂಟಾಗಬಹುದು ಎಂಬುದಾಗಿ ಅವನು ನಿಶ್ಚಯಿಸುತ್ತಾನೆ. ಪ್ರವಾದಿಯವರು ಮನೆಗೆ ಮರಳಿದಾಗ ಆಯಿಷ ಈ ವಿಷಯವನ್ನು ಅವರ ಮುಂದಿಡುತ್ತಾರೆ. ಇದನ್ನು ಆಲಿಸಿದ ಪ್ರವಾದಿಯವರು ಆ ಮೂವರು ವ್ಯಕ್ತಿಗಳನ್ನು ಮನೆಗೆ ಪುನಃ ಬರ ಹೇಳಿ ಕಳುಹಿಸುತ್ತಾರೆ. ಅವರು ಬಂದ ಮೇಲೆ ನೀವು ಈ ರೀತಿಯ ತೀರ್ಮಾನವನ್ನು ಕೈಗೊಂಡು ನಮ್ಮ ಮನೆಯಿಂದ ಹೋಗಿರುವುದನ್ನು ನಾನು ಅರಿತೆನು. ನಾನು ರಾತ್ರಿ ನಮಾಝ್ ಮಾಡುತ್ತೇನೆ ಅದೇ ರೀತಿ ನಿದ್ರಿಸುತ್ತೇನೆ. ನಾನು ಉಪವಾಸದಿಂದ ಇರುತ್ತೇನೆ. ಕೆಲವು ದಿನ ಉಪವಾಸವನ್ನು ತೆರೆಯುತ್ತೇನೆ. ನಾನು ವಿವಾಹ ಮಾಡಿಕೊಂಡಿದ್ದೇನೆ ಎಂದು ಹೇಳುತ್ತಾರೆ. ಯಾರು ನನ್ನ ಚರ್ಯೆ ಪಾಲಿಸುವುದಿಲ್ಲವೋ ಅವನು ನನ್ನ ಸಮುದಾಯದವನಲ್ಲ ಎಂಬುದಾಗಿಯೂ ಎಚ್ಚರಿಸುತ್ತಾರೆ.

ಸಾಮಾನ್ಯವಾಗಿ ಧಾರ್ಮಿಕ ವ್ಯಕ್ತಿ ಆಗಿರುವುದು ಮತ್ತು ಆಧ್ಯಾತ್ಮಿಕತೆಯನ್ನು ರೂಡಿಸಿಕೊಳ್ಳುವುದು ಎಂದರೆ ಎಲ್ಲ ರೀತಿಯ ಲೌಕಿಕ ಸಂಬಂಧಗಳನ್ನು ಕಳೆದುಕೊಂಡು ಆಧ್ಯಾತ್ಮದಲ್ಲಿ ಮುಳುಗುವುದು, ದೇಹವನ್ನು ದಂಡಿಸುವುದು ಎಂಬಂತಹ ಸಾಮಾನ್ಯ ಕಲ್ಪನೆಯು ಅದು ಹೇಗೋ ಸಮಾಜದಲ್ಲಿ ಚಾಲ್ತಿಯಲ್ಲಿದೆ. ಇಂತಹ ಆಧ್ಯಾತ್ಮಿಕತೆಗೆ ಆಯುಷ್ಯ ಕಡಿಮೆ. ಏಕೆಂದರೆ ಇದು ಮನುಷ್ಯ ಪ್ರಕೃತಿಗೆ ವಿರುದ್ಧವಾದುದು. ಮನುಷ್ಯ ನಿರಂತರ ದೇಹದಂಡನೆಯನ್ನು ಮಾಡಿಕೊಂಡರೆ, ಅವನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಇದರ ನೇರ ಪ್ರಭಾವ ಕಾಣಿಸಿಕೊಳ್ಳುತ್ತದೆ. ಆದುದರಿಂದಲೇ ಪ್ರವಾದಿ ಮುಹಮ್ಮದರು(ಸ) ನಿಮ್ಮ ದೇಹದ ಮೇಲೂ ನಿಮಗೆ ಹಕ್ಕುಗಳಿವೆ. ನಿಮ್ಮ ಪತ್ನಿಗೆ ನಿಮ್ಮ ಮೇಲೆ ಹಕ್ಕುಗಳಿವೆ ಎಂಬುದನ್ನು ಬಿಡಿಸಿ ಹೇಳಿರುವರು. ಒಬ್ಬ ವ್ಯಕ್ತಿ ಸಂಪೂರ್ಣ ಸಹಜವಾದ ಯಾವುದೇ ರೀತಿಯ ಅತಿರೇಕಗಳಿಲ್ಲದ ಜೀವನವನ್ನು ಸಾಗಿಸಿ ಮೋಕ್ಷವನ್ನು ಸಾಧಿಸಬಹುದು ಎಂಬುದನ್ನು ಜಗತ್ತಿನ ಜನರಿಗೆ ಕಲಿಸಿಕೊಡುವ ಕೆಲಸವನ್ನು ಪ್ರವಾದಿ ಮುಹಮ್ಮದರು(ಸ) ತಮ್ಮ ಜೀವನದ ಮೂಲಕ ಬಹಳ ಪರಿಣಾಮಕಾರಿಯಾಗಿ ಜೀವಿಸಿ ತೋರಿಸಿದರು.

ಈ ಜಗತ್ತಿಗೊಬ್ಬ ಸೃಷ್ಟಿಕರ್ತನಿದ್ದಾನೆ ಅವನು ಸಕಲವನ್ನು ಸೃಷ್ಟಿಸಿರುವನು. ಪರಿಪಾಲಿಸುತ್ತಿರುವನು. ಪೋಷಿಸುತ್ತಿರುವನು ಮಾತ್ರವಲ್ಲ ನಿಯಂತ್ರಿಸುತ್ತಿರುವನು. ಅವನ ಅಪ್ಪಣೆ ಇಲ್ಲದೆ ಈ ಜಗತ್ತಿನ ಮೇಲೆ ಒಂದು ಹುಲ್ಲುಕಡ್ಡಿಯು ಅಲುಗಾಡುವುದಿಲ್ಲ. ಅವನು ಸರ್ವಾಂತರ್ಯಾಮಿ. ಸಕಲವನ್ನು ಸೂಕ್ಷ್ಮವಾಗಿ ಗಮನಿಸುವವನು. ನಮ್ಮ ಚಟುವಟಿಕೆಗಳನ್ನು ಮಾತ್ರವಲ್ಲ ಮನಸ್ಸಿನಲ್ಲಿ ಉದ್ಭವಿಸುವ ಭಾವನೆಗಳನ್ನು ಬಲ್ಲ ಪ್ರಭುವಿನ ಮುಂದೆ ನಾವಿದ್ದೇವೆ. ಈ ಜೀವನವೆಂಬುದು ಒಂದು ಪರೀಕ್ಷೆಯಾಗಿದೆ. ಎಲ್ಲರಿಗೂ ಉತ್ತರ ಪತ್ರಿಕೆಗಳು ದೊರೆತಿವೆ. ಪ್ರಶ್ನೆಗಳು ಸಮಸ್ಯೆ ಮತ್ತು ಅನುಕೂಲದ ರೂಪದಲ್ಲಿ ಒಂದರ ಹಿಂದೆ ಒಂದು ಬಂದು ನಮ್ಮನ್ನು ಕಾಡುತ್ತಿರುತ್ತದೆ. ಈ ಎಲ್ಲ ವಿಷಯಗಳನ್ನು ನಾವು ಯಾವ ರೀತಿ ಸ್ವೀಕರಿಸುತ್ತೇವೆ ಮತ್ತು ನಮ್ಮ ವರ್ತನೆ ಹೇಗಿದೆ ಎಂಬುದರ ಮೇಲೆ ನಮ್ಮ ಜೀವನದ ಯಶಸ್ಸು ಅಡಗಿದೆ. ಪರೀಕ್ಷೆಗಳಿಗೆ ಹೆದರದೆ ಜೀವನವನ್ನು ಸ್ವೀಕರಿಸಿ ಅದು ಬಂದಂತೆ



ಮುನ್ನಡೆಯುವ ಛಲ ನಮ್ಮಲ್ಲಿದ್ದರೆ ಯಶಸ್ಸು ತನ್ನಿಂತಾನೆ ಬರುತ್ತದೆ. ಒಂದು ವೇಳೆ ಸಂಕಷ್ಟಗಳಿಗೆ ಹೆದರಿ ವಕ್ರಮಾರ್ಗವನ್ನು ಅನುಸರಿಸಿದರೆ ಇಹ ಮತ್ತು ಪರಲೋಕ ಜೀವನವು ನಷ್ಟವಾದಂತೆಯೇ ಸರಿ. ದೇವನ ಬಗ್ಗೆ ಈ ಜೀವನದ ಬಗ್ಗೆ ಒಂದು ಸ್ಪಷ್ಟವಾದ ಅರಿವನ್ನು ಮೂಡಿಸುವ ಕೆಲಸವನ್ನು ಪ್ರವಾದಿ ಮುಹಮ್ಮದರು(ಸ) ಮಾಡಿದರು. ಧರ್ಮವೆಂದರೆ ದೇವನೊಂದಿಗೆ ನಮಗಿರುವ ಸಂಬಂಧ ಎಂದು ಹೇಳಿ ಅಲ್ಲಿಗೆ ನಿಲ್ಲಿಸಲಿಲ್ಲ. ಬದಲಾಗಿ ದೇವನೊಂದಿಗೆ ನಮಗೆ ಹಕ್ಕುಗಳಿರುವಂತೆ ಸಹಜೀವಿಗಳೊಂದಿಗೆ ನಮಗೆ ಹಕ್ಕುಗಳಿವೆ. ಒಂದು ವೇಳೆ ದೇವನ ಹಕ್ಕುಗಳಲ್ಲಿ ಏನಾದರೂ ಕುಂದು ಕೊರತೆ ಸಂಭವಿಸಿದರೆ ಅವನ ಬಳಿ ಪಶ್ಚಾತ್ತಾಪ ಪಟ್ಟು ಮರಳಿದರೆ ಖಂಡಿತವಾಗಿಯೂ ಅವನು ಕ್ಷಮಿಸಬಹುದು. ಆದರೆ ವ್ಯಕ್ತಿ ಇತರ ಸಹಜೀವಿಗಳ ಹಕ್ಕುಗಳಲ್ಲಿ ಚ್ಯುತಿ ಮಾಡಿದರೆ ಅದರ ಬಗ್ಗೆ ಖಂಡಿತವಾಗಿಯೂ ಅವನು ದೇವನ ಮುಂದೆ ಪ್ರಶ್ನಿಸಲ್ಪಡುವನು ಎಂಬ ಈ ಕರ್ತವ್ಯ ಪ್ರಶ್ನೆಯನ್ನು ಪ್ರವಾದಿಯವರು(ಸ) ಸಮಾಜದಲ್ಲಿ ಬೆಳೆಸಿದರು.

ಈ ದೇವ ಭಯ ಮತ್ತು ದೇವನ ಮುಂದೆ ಉತ್ತರಿಸಬೇಕು ಎಂಬಂತಹ ಪ್ರಜ್ಞೆಯು ಸಮಾಜದಲ್ಲಿ ಒಳಿತನ್ನು ಹರಡುವುದಕ್ಕೆ ಹೆಚ್ಚು ಸಹಕಾರಿಯಾಯಿತು. ಒಮ್ಮೆ ಓರ್ವ ಯುವತಿ ಪ್ರವಾದಿಯವರ ಮುಂದೆ ಬಂದು ತನ್ನ ಮೇಲೆ ವ್ಯಭಿಚಾರಕ್ಕೆ ಇಸ್ಲಾಂ ನೀಡುವ ಶಿಕ್ಷೆಯನ್ನು ಜಾರಿಗೊಳಿಸುವಂತೆ ಅಪೇಕ್ಷಿಸುತ್ತಾರೆ. ಅವಳು ಎಸಗಿದ ಕೆಡುಕನ್ನು ವಾಸ್ತವದಲ್ಲಿ ಯಾರೂ ಅರಿತಿರುವುದಿಲ್ಲ. ಆದರೆ ದೇವನ ಮುಂದೆ ನಾನು ಪ್ರಶ್ನಿಸಲ್ಪಡುವೆನು ಎಂಬಂತಹ ಪ್ರಜ್ಞೆಯು ಆಕೆಯನ್ನು ಆ ರೀತಿಯಲ್ಲಿ ಸ್ವತಃ ತಪ್ಪೊಪ್ಪಿಗೆಯನ್ನು ಮಾಡಿಕೊಂಡು ಶಿಕ್ಷೆಯನ್ನು ಸ್ವೀಕರಿಸಲು ಪ್ರೇರೇಪಿಸಿತ್ತು. ಪ್ರವಾದಿಯವರು ಶಿಕ್ಷೆಯನ್ನು ಜಾರಿಗೊಳಿಸಿದ ಬಳಿಕ ಅವಳಿಗಾಗಿ ಜನಾಝ ನಮಾಝನ್ನು ನಿರ್ವಹಿಸಿದರು. (ಮೃತ ವ್ಯಕ್ತಿಯ ಪಾಪವಿಮೋಚನೆಗಾಗಿ ನಡೆಸುವ ಸಾಮೂಹಿಕ ನಮಾಝ್) ಯಾರೋ ಆಕೆ ವ್ಯಭಿಚಾರಿಣಿ ಅಲ್ಲವೇ ಆಕೆಗಾಗಿ ಯಾಕೆ ಪ್ರಾರ್ಥಿಸುತ್ತೀರಿ ಎಂದು ಪ್ರಶ್ನಿಸಿದಾಗ, ಆಕೆ ಮಾಡಿದಂತಹ ಪಶ್ಚಾತ್ತಾಪವನ್ನು ಇಲ್ಲಿ ಮದೀನಾದ ನಿವಾಸಿಗಳಿಗೆ ಹಂಚಿದರೆ ಅವರು ಮಾಡಿದಂತಹ ಪಾಪಗಳೂ ಪರಿಹರಿಸಲ್ಪಡಬಹುದು ಎಂದು ಬಹಳ ಮಾರ್ಮಿಕವಾಗಿ ಉತ್ತರಿಸಿದರು.

ಸಹಜೀವಿಗಳೊಂದಿಗೆ ಕರುಣೆಯೊಂದಿಗೆ ಕೂಡಿದ ಉದಾರತೆಯ ವರ್ತನೆಯನ್ನು ತೋರಲು ಪ್ರವಾದಿಯವರು ತಾಕೀತು ಮಾಡಿರುವರು. ಪ್ರವಾದಿಯವರ ಕಾಲದಲ್ಲಿ ಒಮ್ಮೆ ಒಬ್ಬ ಗ್ರಾಮೀಣ ಅರಬನು ಮಸೀದಿಯಲ್ಲಿ ಮೂತ್ರ ಶಂಕೆ ಮಾಡಲಾರಂಬಿಸಿದಾಗ ಜನರು ಅವನನ್ನು ಥಳಿಸಲು ಮುಂದಾದರು. ಆಗ ಜನರನ್ನು ಉದ್ದೇಶಿಸಿ ಪ್ರವಾದಿಯವರು ಹೀಗೆಂದರು. ಅವನನ್ನು ಬಿಟ್ಟುಬಿಡಿ. ಆ ಮೂತ್ರದ ಮೇಲೆ ಒಂದು ಬಕೆಟ್ ನೀರನ್ನು ಹಾಯಿಸಿಬಿಡಿ. ಏಕೆಂದರೆ ನಮ್ಮನ್ನು ಸುಲಭಗೊಳಿಸಲಿಕ್ಕಾಗಿ ನಿಯೋಜಿಸಲಾಗಿದೆ. ಹೊರತು ಕಠಿಣತೆ ತೋರಿಸಲಕ್ಕಾಗಿ ಅಲ್ಲ, ಧರ್ಮದಲ್ಲಿ ಕಠಿಣತೆ ಎಂಬುದಿಲ್ಲ, ಇಸ್ಲಾಮಿನ ಅನುಯಾಯಿಗಳು ಕಠಿಣತೆಯನ್ನು ತೊರೆಯಬೇಕು. ಸೌಲಭ್ಯ ಉಂಟುಮಾಡುವುದು ನಮ್ಮ ಕರ್ತವ್ಯವಾಗಿದೆ ಎಂದು ಅವರು ನೆನಪಿಸಿಕೊಂಡರು. ಪ್ರವಾದಿ ಮುಹಮ್ಮದರು(ಸ) ಹೇಳಿದರು. ಖಂಡಿತ ಈ ಧರ್ಮವು ಸರಳವಾಗಿದೆ. ಧರ್ಮವನ್ನು ಯಾರು ಎದುರಿಸಿದರೂ ಅದು ಅವನನ್ನು ಸೋಲಿಸುವುದು. ಆದುದರಿಂದ ನೀವು ನೇರ ಮಾರ್ಗದಲ್ಲಿ ನಡೆಯಿರಿ. ಉಗ್ರವಾದ ಮತ್ತು ಅತಿರೇಕದಿಂದ ದೂರವಿರಿ. ಸಂತೋಷವಾಗಿರಿ ನಿಮಗೆ ಮೋಕ್ಷ ಸಿಗುವುದು.

ದೇವನಿಗೆ ಹರಕೆ ಹೊರುವುದು ಸಾಮಾನ್ಯವಾಗಿ ನಮ್ಮಲ್ಲಿ ರೂಢಿಯಲ್ಲಿರುವ ಪದ್ಧತಿ. ಆದರೆ ಇಸ್ಲಾಮ್ ಸಹಜೀವಿಗಳಿಗಾಗಿ ಖರ್ಚು ಮಾಡುವುದಕ್ಕೆ ವಿಶೇಷ ಮಹತ್ವವನ್ನು ನೀಡುತ್ತದೆ. ಸಂಪತ್ತಿನ ನಿಜವಾದ ಒಡೆಯನು ಅಲ್ಲಾಹನಾಗಿರುವನು. ಕೇವಲ ಸೀಮಿತ ಅವಧಿಯವರೆಗೆ ಅದರ ಮೇಲ್ನೋಟವನ್ನು ನಮ್ಮ ಕೈಗೆ ಸಂಪತ್ತಿನ ಮೂಲಕ ನೀಡಿರುತ್ತಾನೆ. ಆದುದರಿಂದ ಅವನ ಆದೇಶಗಳಿಗೆ ಬದ್ಧವಾಗಿ ಅದನ್ನು ಖರ್ಚು ಮಾಡಬೇಕು ಎಂಬ ಆದೇಶವನ್ನು ನೀಡಿರುತ್ತಾನೆ.

ಪ್ರವಾದಿಯವರು(ಸ) ಹೇಳಿದರು ಒಂದು ದೀನಾರನ್ನು ನೀವು ದೇವನ ಮಾರ್ಗದಲ್ಲಿ ಖರ್ಚು ಮಾಡಿರುವಿರಿ. ಒಂದು ದೀನಾರನ್ನು ನೀವು ಜೀತ ವಿಮುಕ್ತಿಗಾಗಿ ಖರ್ಚು ಮಾಡುತ್ತೀರಿ. ಒಂದು ದೀನಾರನ್ನು ನೀವು ಬಡವರಿಗೆ ದಾನ ಮಾಡಲು ಖರ್ಚು ಮಾಡುತ್ತೀರಿ. ಮತ್ತು ಒಂದು ದೀನಾರನ್ನು ನೀವು ನಿಮ್ಮ ಮನೆ ಮಂದಿಯ ಮೇಲೆ ಖರ್ಚು ಮಾಡುತ್ತೀರಿ, ಆ ಪೈಕಿ ಅತ್ಯಧಿಕ ಪುಣ್ಯವಿರುವುದು ನೀವು ನಿಮ್ಮ ಮನೆ ಮಂದಿಗೆ ಖರ್ಚು ಮಾಡಿದ ದೀನಾರಿಗಾಗಿದೆ.

ಒಮ್ಮೆ ಓರ್ವ ವ್ಯಕ್ತಿ ಬಹಳ ಹುರುಪಿನೊಂದಿಗೆ ತಮ್ಮ ಕೆಲಸದ ಕಡೆಗೆ ಹೋಗುತ್ತಾ ಇದ್ದರು. ಇದನ್ನು ನೋಡಿ ಸಹಾಬಿಯೋರ್ವರು ಈ ವ್ಯಕ್ತಿಯ ಈ ಹುರುಪಿನ ನಡಿಗೆ ಅಲ್ಲಾಹನ ಮಾರ್ಗದ ಜಿಹಾದ್ ನಲ್ಲಿ ಆಗಿದ್ದರೆ ಎಷ್ಟು ಚೆನ್ನಾಗಿತ್ತು ಎಂದರು. ಇದನ್ನು ಆಲಿಸಿದ ಪ್ರವಾದಿಯವರು ಒಂದು ವೇಳೆ ಆ ವ್ಯಕ್ತಿ ತನ್ನ ಪತ್ನಿ ಮಕ್ಕಳ ಹೊಟ್ಟೆ ತುಂಬಿಸಲಿಕ್ಕಾಗಿ ಪರಿಶ್ರಮ ಪಡಲು ಹೋಗುತ್ತಿದ್ದಾನೆ ಎಂದಾದರೆ ಅವನು ಅಲ್ಲಾಹನ ಮಾರ್ಗದಲ್ಲಿದ್ದಾನೆ ಎನ್ನುವ ಮೂಲಕ ಜೀವನದ ಸಂತುಲಿತತೆಯ ಪರಿಚಯವನ್ನು ಮಾಡಿಸಿದರು.

ಕುಟುಂಬದ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುವುದು ಕುಟುಂಬದ ಯಜಮಾನನ ಕರ್ತವ್ಯವಾಗಿದೆ. ಅದನ್ನು ಪ್ರಾಮಾಣಿಕತೆಯೊಂದಿಗೆ ನಿರ್ವಹಿಸಬೇಕು. ಅದಕ್ಕಾಗಿ ಪರಿಶ್ರಮ ಪಡುವುದು ದೇವನ ಸಂಪ್ರೀತಿಗೆ ಕಾರಣವಾಗುತ್ತದೆ ಎಂದು ಕಲಿಸಿಕೊಟ್ಟರು. ಆರ್ಥಿಕ ಜೀವನವು ಸಂತುಲಿತವಾಗಿರಬೇಕು ಎಂಬುದು ಪ್ರವಾದಿಯವರ ಶಿಕ್ಷಣದ ತಿರುಳಾಗಿದೆ. ಧರ್ಮ ಬದ್ಧ (ಹಲಾಲ್) ರೂಪದಲ್ಲಿ ಸಂಪತ್ತನ್ನು ಗಳಿಸಬಹುದು. ಸಂಪಾದಿಸಬಹುದು . ಆದರೆ ಅದನ್ನು ಏನು ಮಾಡಬೇಕು ಏನು ಮಾಡಬಾರದು ಎಂಬುದರ ಸ್ಪಷ್ಟ ನಿರ್ದೇಶನವನ್ನು ಪ್ರವಾದಿಯವರು ನೀಡಿರುವರು.

ನಿಮ್ಮ ಕೈಯನ್ನು ಕೊರಳಿಗೆ ಕಟ್ಟಿಕೊಂಡಿರಬೇಡಿರಿ ಮತ್ತು ನಿಂದ್ಯರೂ ನಿಸ್ಸಹಾಯಕರು ಆಗಿಬಿಡುವಂತೆ ಅದನ್ನು ಸಂಪೂರ್ಣವಾಗಿ ತೆರೆದಿಟ್ಟು ಬಿಡಬೇಡಿ. ದುಂದು ವೆಚ್ಚ ಮಾಡಬೇಡಿರಿ. ದುಂದು ವೆಚ್ಚ ಮಾಡುವವನು ಶೈತಾನನ ಸಹೋದರನಾಗಿರುತ್ತಾನೆ. ಅವರು ಖರ್ಚು ಮಾಡುವಾಗ ದುಂದು ವೆಚ್ಚ ಮಾಡುವುದಿಲ್ಲ, ಜಿಪುಣತೆಯನ್ನು ತೋರುವುದಿಲ್ಲ. ಅವರ ಖರ್ಚು ಇವೆರಡರ ನಡುವೆ ಸಮತೂಕದಲ್ಲಿ ನಿಂತಿರುತ್ತದೆ. ಎಂಬ ಪವಿತ್ರ ಕುರಾನಿನ ಶಿಕ್ಷಣದ ಬೆಳಕಿನಲ್ಲಿ ಒಂದು ಸುಂದರವಾದ ಆರ್ಥಿಕ ಜೀವದ ಶಿಷ್ಟಾಚಾರವನ್ನು ಪ್ರವಾದಿಯವರು ಪರಿಚಯಿಸಿದರು.

ದುಂದುಗಾರಿಕೆ ಎಂದರೇನು ಎಂಬುದನ್ನು ಕಲಿಸುತ್ತಾ ಧರ್ಮ ಬದ್ಧವಲ್ಲದ ಕೆಲಸಗಳಿಗೆ ಖರ್ಚು ಮಾಡುವುದು. ಧರ್ಮ ಬದ್ಧವಾದ ಕಾರ್ಯಗಳಿಗಾಗಿ ಅತಿಯಾಗಿ ಖರ್ಚು ಮಾಡುವುದು. ಆದಾಯಕ್ಕಿಂತ ಹೆಚ್ಚು ಖರ್ಚು ಮಾಡುವುದು. ಅಲ್ಲಾಹನ ಸಂಪ್ರೀತಿಯ ಬದಲು ಆಡಂಬರ ಪ್ರದರ್ಶನಕ್ಕಾಗಿ, ಖ್ಯಾತಿಗಾಗಿ ವ್ಯಯಿಸುವುದು ದುಂದುಗಾರಿಕೆ ಎಂದರು. ಅದೇ ರೀತಿ ಜಿಪುಣತೆ ಎಂದರೇನು ಎಂಬುದಕ್ಕೆ ವ್ಯಾಖ್ಯಾನವನ್ನು ನೀಡುತ್ತಾ, ಒಬ್ಬನು ತನ್ನ ಮತ್ತು ತನ್ನ ಕುಟುಂಬದ ಅಗತ್ಯಗಳಿಗಾಗಿ ಶಕ್ತಿಯಾನುಸಾರ ವ್ಯಯಿಸದಿರುವುದು. ಒಳಿತು ಮತ್ತು ಶ್ರೇಷ್ಠ ಕಾರ್ಯಗಳಿಗಾಗಿ ಕೈಯಿಂದ ಚಿಕ್ಕಾಸನ್ನು ಖರ್ಚು ಮಾಡದಿರುವುದು ಎಂದರು. ಹೀಗೆ ಆರ್ಥಿಕ ಜೀವನದಲ್ಲಿ ಸಂತುಲನೆಯನ್ನು ಕಾಪಾಡಲು ಪ್ರವಾದಿಯವರು ಸ್ಪಷ್ಟ ಮಾರ್ಗದರ್ಶನ ನೀಡಿರುವರು. ವ್ಯಕ್ತಿಗೆ ಸರಿಯಾದ ಮಾರ್ಗದಲ್ಲಿ ಪ್ರಾಮಾಣಿಕವಾಗಿ ಸಂಪಾದಿಸಿ ಕೋಟಿಗಟ್ಟಲೆ ಹಣ ಸಂಗ್ರಹಿಸಲು ಅವಕಾಶವಿದೆ. ಆದರೆ ಅದು ನಿಷಿದ್ಧ ರೂಪದಿಂದ ಸಂಗ್ರಹಿಸಿದ್ದಾಗಿರಬಾರದು. ಅದೇ ವೇಳೆ ಸಮಾಜದಲ್ಲಿರುವ ಬಡವರ ನಿರ್ಗತಿಕರ ಪಾಲು ಆ ಸಂಪತ್ತಿನಲ್ಲಿ ಸೇರಿಕೊಂಡಿರುತ್ತದೆ. ಅವರ ಹಕ್ಕುಗಳನ್ನು ಯಥಾವಿಧಿ ಝಕಾತಿನ ರೂಪದಲ್ಲಿ ನೀಡುತ್ತಿರಬೇಕು. ಮಾತ್ರವಲ್ಲ ಅದಕ್ಕಿಂತ ಹೆಚ್ಚಾಗಿ ಸ್ವತಃ ಮನಸಾರೆ ದಾನ ಧರ್ಮಗಳನ್ನು ಮಾಡಬೇಕು ಎಂದು ನಿರಂತರ ಪ್ರೇರೇಪಿಸಿರುವರು. ಪ್ರವಾದಿಯವರಿಗೆ ಏನಾದರೂ ಉಡುಗೊರೆ ರೂಪದಲ್ಲಿ ಸಿಕ್ಕಿದರೆ ಕೂಡಲೇ ಅದನ್ನು ದಾನ ನೀಡಲು ಮುಂದಾಗುತ್ತಿದ್ದರು.

ಅಲ್ಲಾಹನ ಮಾರ್ಗದಲ್ಲಿ ವ್ಯಯಿಸದ ಹಣ ಮಾತ್ರ ಸುರಕ್ಷಿತವಾಗಿ ಉಳಿಯುತ್ತದೆ ಎಂಬ ವಾಸ್ತವಿಕತೆಯನ್ನು ಮನುಷ್ಯರಿಗೆ ಕಲಿಸಿದರು. ಇದನ್ನು ತಿಳಿದರೆ ಅವನೆಂದೂ ಜಿಪುಣತೆಯಂತಹ ಕೆಡುಕುಗೆ ಬಲಿ ಬೀಳಲಾರನು. ಇದೇ ವಾಸ್ತವಿಕತೆಯನ್ನು ಪ್ರವಾದಿಯವರು ಒಂದು ವಚನದಲ್ಲಿ ಪ್ರಭಾವಪೂರ್ಣ ಶೈಲಿಯಲ್ಲಿ ಈ ರೀತಿ ಮನವರಿಕೆ ಮಾಡಿಸಿರುವರು. ಪ್ರವಾದಿಯವರು ತಮ್ಮ ಸಂಗಾತಿಗಳಲ್ಲಿ ವಿಚಾರಿಸಿದರು ನಿಮ್ಮ ಪೈಕಿ ಯಾರಿಗೆ ತಮ್ಮ ಸೊತ್ತಿಗಿಂತಲೂ ತಮ್ಮ ಉತ್ತರಾಧಿಕಾರಿಯ ಸೊತ್ತು ಹೆಚ್ಚು ಪ್ರಿಯವಾಗಿದೆ? ಆಗ ಸಹಾಬಿಗಳು ಹೇಳಿದರು ನಮ್ಮಲ್ಲಿ ಪ್ರತಿಯೊಬ್ಬನಿಗೂ ತನ್ನ ಸಂಪತ್ತು ತನ್ನ ಉತ್ತರಾಧಿಕಾರಿಯ ಸಂಪತ್ತಿಗಿಂತ ಹೆಚ್ಚು ಪ್ರಿಯವಾಗಿದೆ. ಆಗ ಪ್ರವಾದಿಯವರು ಮನುಷ್ಯನ ಸ್ವಂತ ಸಂಪತ್ತು ಅವನು ಮುಂದೆ ಕಳುಹಿಸಿರುವುದಾಗಿದೆ ಅವನು ಹಿಂದೆ ಉಳಿಸಿರುವುದು ಅವನ ಉತ್ತರಾಧಿಕಾರಿಯ ಸಂಪತ್ತಾಗಿದೆ ಎಂದರು. ಸಾಮಾನ್ಯವಾಗಿ ಮನುಷ್ಯನು ತನ್ನ ಸೊತ್ತನ್ನು ಜಾಗ್ರತೆಯಿಂದ ಉಳಿಸಿರುತ್ತಾನೆ ಮತ್ತು ಅದನ್ನೇ ತನ್ನ ಸಂಪತ್ತು ಎಂದು ಬಗೆಯುತ್ತಾನೆ. ಕೊನೆಗೆ ಒಂದು ದಿನ ಈ ರೀತಿ ಉಳಿಸಿಟ್ಟಂತಹ ಸೊತ್ತನ್ನು ಉತ್ತರಾಧಿಕಾರಿಗೆ ಬಿಟ್ಟು ಹೋಗುತ್ತಾನೆ. ನಿಜವಾಗಿ ಅವನು ತನ್ನ ಕೈಯಿಂದ ಅಲ್ಲಾಹನ ಮಾರ್ಗದಲ್ಲಿ ವ್ಯಯಿಸುವ ಮೂಲಕ ಪರಲೋಕಕ್ಕಾಗಿ ಕೂಡಿಟ್ಟ ಸಂಪತ್ತು ಅವನ ಕೆಲಸಕ್ಕೆ ಬರುವುದು. ಅವನ ಕೆಲಸಕ್ಕೆ ಬರುವ ಸೊತ್ತೇ ನಿಜವಾಗಿ ಅವನ ಸೊತ್ತಾಗಿದೆ.

ಎಲ್ಲ ರೀತಿಯ ಆರಾಧನೆಗಳಲ್ಲೂ ಸಮತೋಲನವನ್ನು ಪಾಲಿಸಬೇಕು ಯಾವುದೂ ಅತಿಯಾಗಬಾರದು ಎಂಬುದು ಪ್ರವಾದಿಯವರ ಸ್ಪಷ್ಟ ನಿರ್ದೇಶನವಾಗಿತ್ತು. ಒಮ್ಮೆ ಮಸೀದಿಯಲ್ಲಿ ಎರಡು ಕಂಬಗಳ ಮಧ್ಯೆ ಒಂದು ಹಗ್ಗ ತೂಗು ಬಿಟ್ಟಿರುವುದನ್ನು ಪ್ರವಾದಿಯವರು ಕಂಡರು. ಈ ಹಗ್ಗ ಏನೆಂದು ಅವರು ವಿಚಾರಿಸಿದರು. ಇದು

ಝೈನಬ್ರವರ ಹಗ್ಗ. ಅವರು ನಮಾಝ್ ಮಾಡುತ್ತಾರೆ. ದಣಿದಾಗ ಇದರ ಆಸರೆಯನ್ನು ಪಡೆಯುತ್ತಾರೆ ಎಂದು ಜನರು ಹೇಳಿದರು. ಆಗ ಪ್ರವಾದಿ ಮುಹಮ್ಮದರು(ಸ) ಹೇಳಿದರು ಈ ಹಗ್ಗವನ್ನು ಕಳಚಿ ಬಿಡಿರಿ. ನಿಮ್ಮಲ್ಲಿ ಯಾರಾದರೂ ಹುರುಪು ಹಾಗೂ ಉತ್ಸಾಹದಿಂದ ನಮಾಝ್ ಮಾಡಲು ಸಾಧ್ಯವಾಗುವ ತನಕ ಮಾತ್ರ ನಮಾಝ್ ಮಾಡಲಿ. ಸ್ವಲ್ಪ ದಣಿವು ಮತ್ತು ಸುಸ್ತು ಆವರಿಸಿದಾಗ ಆತ ಮಲಗಿಕೊಳ್ಳಲಿ.

ಪ್ರವಾದಿಯವರು ಒಂದು ಪ್ರಯಾಣದಲ್ಲಿದ್ದರು. ಒಬ್ಬ ವ್ಯಕ್ತಿ ತಲೆ ತಿರುಗಿ ಬಿದ್ದನು. ಉಳಿದವರು ಉಪಚರಿಸುತ್ತಿದ್ದರು. ವ್ಯಕ್ತಿ ಉಪವಾಸದಿಂದ ಇದ್ದಾನೆ ಎಂದು ಜನರು ಹೇಳಿದರು. ಪ್ರಯಾಣದ ವೇಳೆ ಉಪವಾಸ ಆಚರಿಸುವುದು ಪುಣ್ಯದ ಕೆಲಸವಲ್ಲ ಎಂದು ಪ್ರವಾದಿಯವರು ಹೇಳಿದರು. ದೇಹದಂಡನೆಯನ್ನು ಧರ್ಮವೆಂದು ಪರಿಗಣಿಸುವುದನ್ನು ಇಸ್ಲಾಂ ನಿಷೇಧಿಸುತ್ತದೆ ಆದ್ದರಿಂದಲೇ ಇಸ್ಲಾಮಿನಲ್ಲಿ ಸನ್ಯಾಸಕ್ಕೆ ಅವಕಾಶವಿಲ್ಲ. **- ಸಬೀಹ** ಫಾತಿಮ

## ಕೊಲೆಗಾರ

ನಿನ್ನ ತಪ್ಪಿಗೆ ಶಿಕ್ಷೆ ಆಗಲೇಬೇಕು. ನಿನ್ನದು ಅಂತಿತಾ ತಪ್ಪಲ್ಲ. ನೀನು ಕೊಲೆಗಾರ ಹಾಗಾಗಿ ಇದಕ್ಕೆ ಬಹುದೊಡ್ಡ ಶಿಕ್ಷೆಯ ಅಗತ್ಯ ಇದೆ. ಅದಲ್ಲದೆ ನೀನು ಯಾವತ್ತೂ ಒಂದು ದಿನ ತಪ್ಪು ಮಾಡಿದವನಲ್ಲ. ಪ್ರತಿದಿನವೂ ತಪ್ಪು ಮಾಡುತ್ತಾನೆ ಇರುವವನು. ಆ ಕಾರಣಕ್ಕೆ ನಿನ್ನನ್ನ ಶಿಕ್ಷಿಸಲೇಬೇಕಾಗಿದೆ. ಪ್ರತಿದಿನ ಪ್ರತಿ ಕ್ಷಣ ನೀನು ಕೊಲೆಗಾರನಾಗುತ್ತಿದ್ದೀಯ. ನಿನ್ನಿಂದ ಕೊಲೆಯಾದವರು ಪ್ರತಿದಿನವೂ ಇಲ್ಲಿ ದೂರನ್ನ ದಾಖಲಿಸುತ್ತಿದ್ದಾರೆ. ನಿನ್ನ ಶಿಕ್ಷೆಯ ಪ್ರಮಾಣ ತುಂಬಾ ದೊಡ್ಡದಾಗುವ ಹಂತದಲ್ಲಿದೆ. ನಿನಗೆ ಹೇಳುವುದನ್ನ ಮರೆತಿದ್ದೆ .ನೀನು ಕೊಂದಿ ರುವುದು ಸಮಯ ರಾಯನನ್ನ. ಆತನಿಗೆ ತುಂಬಾ ನೋವಿದೆ. ನಿನ್ನ ಏಳಿಗೆಗೆ ತನ್ನ ಇಡೀ ದಿನವನ್ನ ನಿಮ್ಮೊಂದಿಗೆ ಹಂಚಿಕೊಂಡಿದ್ದಾನೆ. ಆದರೆ ಪ್ರತಿ ಕ್ಷಣವೂ ನೀನು ಅವನನ್ನ ಕೊಂದು ಅವನ ನಾಶವನ್ನು ಮಾಡುತ್ತಿದ್ದೀಯಾ. ಆತನಿಗೆ ತಾನು ಸರಿಯಾಗಿ ಬಳಕೆಯಾಗುತ್ತಿಲ್ಲ ಅನ್ನುವ ಬೇಸರವಿದೆ . ಹಾಗಾಗಿ ದೂರನ್ನ ದಾಖಲಿಸಲಾಗಿದೆ. ಶಿಕ್ಷೆ ಅಂತೂ ಕಾಯುತ್ತಿದೆ. ಶಿಕ್ಷೆಯ ಪ್ರಮಾಣ ಕಡಿಮೆಯಾಗಬೇಕಾದರೆ ಇನ್ನು ಮುಂದೆ ಸಮಯವನ್ನ ಕೊಲ್ಲುವುದನ್ನ ನಿಲ್ಲಿಸಿ ಬಿಡು. **-ಧೀರಜ್ ಬೆಳ್ಳಾರೆ**

## 18-9-2025 ದಿನ ಭವಿಷ್ಯ

**ಮೇಷ:** ಇಂದು ನಿಮ್ಮ ವಿಶ್ವಾಸ ಬೆಳೆಯುತ್ತದೆ ಮತ್ತು ಪ್ರಗತಿ ನಿಶ್ಚಿತವಾಗಿದೆ. ಇಂದು ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ. ಒಂದು ವೈವಾಹಿಕ ಸಂಬಂಧವನ್ನು ಹೊಂದಲು ಒಳ್ಳೆಯ ಸಮಯ. ನಿಮ್ಮ ಜೀವನದಲ್ಲಿ ನಂತರ ವಿಷಾದಿಸಬಹುದಾದ ಆತುರದ ನಿರ್ಧಾರಗಳನ್ನು ಕೈಗೊಳ್ಳಬೇಡಿ.

**ವೃಷಭ:** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು ಮತ್ತು ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು ಮತ್ತು ಆ ಸಲಹೆಗೆ ಜೀವನದಲ್ಲಿ ಸ್ಥಾನವನ್ನು ಸಹ ನೀಡಬಹುದು. ನಿಮ್ಮ ಪ್ರೀತಿ ಒಂದು ಹೊಸ ಎತ್ತರವನ್ನು ತಲುಪುತ್ತದೆ.

**ಮಿಥುನ:** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ.

**ಕರ್ಕಾಟಕ:** ಅಸಾಧ್ಯವಾದ ಅನಗತ್ಯ ಚಿಂತನೆಯಲ್ಲಿ ನಿಮ್ಮ ಶಕ್ತಿ ವ್ಯರ್ಥ ಮಾಡುವ ಬದಲು ಅದನ್ನು ಸರಿಯಾದ ದಿಕ್ಕಿನಲ್ಲಿ ಬಳಸಿ. ನೀವು ಇಂದು ಗಣನೀಯ ಪ್ರಮಾಣದ ಹಣವನ್ನು ಸಹ ಹೊಂದಿರುತ್ತೀರಿ ಮತ್ತು ಅದರೊಂದಿಗೆ ಮನಸ್ಸಿನ ಶಾಂತಿ ಇರುತ್ತದೆ. ನಿಮ್ಮ ಕುಟುಂಬದ ಸಲುವಾಗಿ ಏನಾದರೂ ಉದಾತ್ತ ಮತ್ತು ಉಪಯುಕ್ತವಾದದ್ದರ ಸಲುವಾಗಿ ಶ್ರಮಪಡಿ.

**ಸಿಂಹ:** ಸ್ವಯಂ ಸುಧಾರಣೆಯ ಯೋಜನೆಗಳು ಒಂದಕ್ಕಿಂತ ಹೆಚ್ಚು ರೀತಿಯಲ್ಲಿ ಫಲ ನೀಡುತ್ತವೆ - ನಿಮ್ಮ ಬಗ್ಗೆ ನಿಮಗೇ ಒಳ್ಳೆಯದೆನಿಸುತ್ತದೆ ಮತ್ತು ವಿಶ್ವಾಸ ಮೂಡುತ್ತದೆ. ನೀವು ಇತರರ ಮಾತುಗಳನ್ನು ನಂಬಿ ಇಂದು ಹೂಡಿಕೆ ಮಾಡಿದಲ್ಲಿ ಇಂದು ಆರ್ಥಿಕ ನಷ್ಟದ ಸಾಧ್ಯತೆಯಿದೆ. ನಿಮ್ಮ ವಸ್ತುಗಳ ಬಗ್ಗೆ ಅಸಡ್ಡೆ ಹೊಂದಿದ್ದಲ್ಲಿ ನಷ್ಟ ಅಥವಾ ಕಳ್ಳತನ ಆಗಬಹುದು.

ಕನ್ಯಾ: ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು ಮತ್ತು ಈ ಕೌಶಲ್ಯವನ್ನು ಕಲಿತು ನೀವು ನಿಮ್ಮ ಹಣವನ್ನು ಉಳಿಸಬಹುದು. ದಿನದ ಕೊನೆಯಲ್ಲಿ ಒಬ್ಬ ಹಳೆಯ ಸ್ನೇಹಿತರ ಭೇಟಿ ನಿಮ್ಮ ಸಂಜೆಯನ್ನು ಬೆಳಗಿಸುತ್ತದೆ.

ತುಲಾ: ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ತಮ್ಮ ಹಣವನ್ನು ಬೆಟ್ಟಿಂಗ್‌ನಲ್ಲಿ ಖರ್ಚು ಮಾಡಿದವರು ಇಂದು ನಷ್ಟ ಅನುಭವಿಸುವ ಸಾಧ್ಯತೆಯಿದೆ. ಬೆಟ್ಟಿಂಗ್‌ನಿಂದ ದೂರವಿರಲು ನಿಮಗೆ ಸೂಚಿಸಲಾಗಿದೆ. ನಿಮ್ಮ ಸಂಗಾತಿಯ ಜೊತೆಗಿನ ಸಂಬಂಧ ನಿಮ್ಮ ಕಚೇರಿ ಕೆಲಸದ ಕಾರಣ ಹಾಳಾಗಬಹುದು.

**ವೃಶ್ಚಿಕ:** ಸ್ನೇಹಿತರಿಂದ ಒಂದು ವಿಶೇಷ ಅಭಿನಂದನೆ ಸಂತೋಷದ ಮೂಲವಾಗುತ್ತದೆ. ಇದೇಕೆಂದರೆ ನೀವು ನಿಮ್ಮ ಜೀವನವನ್ನು ಮರಗಳಂತೆ ಮಾಡಿಕೊಳ್ಳುತ್ತೀರಿ-ಅವುಗಳು ತಾವು ಸೂರ್ಯನಡಿ ನಿಂತು ಶಾಖದ ಬೇಗೆ ತಡೆದುಕೊಂಡು ಇತರರಿಗೆ ನೆರಳು ನೀಡುತ್ತವೆ. ಆಲ್ಕೋಹಾಲ್ ಸಿಗರೇಟ್ ಮುಂತಾದವುಗಳಿಗೆ ಹಣವನ್ನು ಖರ್ಚು ಮಾಡಬಾರದು.

**ಧನು:** ಸಂಗಾತಿಯೊಡನೆ ಚಲನಚಿತ್ರ - ರಂಗಭೂಮಿ ಅಥವಾ ಊಟ ನಿಮ್ಮನ್ನು ಒಂದು ಶಾಂತ ಮತ್ತು ಅದ್ಭುತವಾದ ಮನಸ್ಥಿತಿಯಲ್ಲಿರುತ್ತದೆ ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಕೆಲಸದ ಒತ್ತಡ ನಿಮ್ಮ ಮನಸ್ಸನ್ನು ಆವರಿಸುತ್ತದೆ ಹಾಗೂ ಇದು ಕುಟುಂಬ ಮತ್ತು ಸ್ನೇಹಿತರಿಗೆ ಯಾವುದೇ ಸಮಯವಿಲ್ಲದಂತೆ ಮಾಡುತ್ತದೆ.

**ಮಕರ:** ನಿಮ್ಮ ಸಾಮಾನ್ಯ ಜ್ಞಾನದ ಜೊತೆಗೆ ನಿಮ್ಮ ನಿರಂತರ ಪ್ರಯತ್ನ ಖಂಡಿತವಾಗಿಯೂ ಯಶಸ್ಸು ತರುವುದರಿಂದ ತಾಳ್ಮೆಯಿಂದಿರಿ. ನೀವು ಇಂದು ಹಣ ಉಳಿಸುವುದು ಕಷ್ಟ ನೀವು ಇಂದು ಅತಿಯಾಗಿ ಖರ್ಚು ಮಾಡುವ ಅಥವಾ ನಿಮ್ಮ ಪರ್ಸ್ ಕಳೆದುಕೊಳ್ಳುವ ಸಾಧ್ಯತೆಗಳಿವೆ ನಿರ್ಲಕ್ಷ್ಯತನದಿಂದ ಕೆಲವು ಸಮಸ್ಯೆಗಳು ಖಂಡಿತ. ಮಕ್ಕಳಿಗೆ ಅವರ ಮನೆಗೆಲಸ ಪೂರ್ಣಗೊಳಿಸಲು ಸಹಾಯ ಮಾಡುವ ಸಮಯ.

**ಕುಂಭ:** ಹೊರಾಂಗಣ ಚಟುವಟಿಕೆಗಳು ಇಂದು ದಣವು ಮತ್ತು ಒತ್ತಡ ತರುತ್ತವೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ. ಸ್ನೇಹಿತರು ಮತ್ತು ಸಂಬಂಧಿಗಳು ಉಪಕಾರ ಮಾಡುತ್ತಾರೆ ಮತ್ತು ನೀವು ಅವರ ಸಂಗದಲ್ಲಿ ಸಾಕಷ್ಟು ಸಂತೋಷವಾಗಿರುವಿರಿ.

**ಮೀನ:** ಜೀವನದಲ್ಲಿ ಒತ್ತಡದ ಮನೋಭಾವವನ್ನು ತಪ್ಪಿಸಿ ವ್ಯಾಪಾರ ಸಾಲಕ್ಕಾಗಿ ನಿಮ್ಮ ಬಳಿ ಬರುವವರನ್ನು ನಿರ್ಲಕ್ಷಿಸಿ. ಸಂಗಾತಿಯು ಸಂತೋಷ ನೀಡಲು ಪ್ರಯತ್ನ ಮಾಡಿದಾಗಿನ ಪೂರ್ಣ ಸಂತೋಷದ ಒಂದು ದಿನ. ಇಂದು ನಿಮ್ಮ ಪ್ರೀತಿಪಾತ್ರರು ತನ್ನ ಮನಸ್ಥಿತಿಯನ್ನು ನಿಮ್ಮ ಮುಂದೆ ಇಡಲು ಸಾಧ್ಯವಾಗುವುದಿಲ್ಲ ಇದರಿಂದಾಗಿ ನೀವು ಅಸಮಾಧಾನಗೊಳ್ಳಬಹುದು.

## ಬದುಕಿನ ವೈರುಧ್ಯಗಳ ಈ ಪಾದ ಪುಣ್ಯ ಪಾದ

ಭಾನುವಾರ ಬೆಂಗಳೂರಿನ ನಾಗರಬಾವಿಯಲ್ಲಿ ಬಾಡಿಗೆ ಮನೆಯಲ್ಲಿರುವ ಮಗನ ಮನೆಯಲ್ಲಿದ್ದೆ. ಮದ್ಯಾಹ್ನ ಮನೆಗೆ ಬಂದ ಮಗನ ಸ್ನೇಹಿತ ಅವರ ಮನೆಗೆ ಸಂಜೆ ನಾವು ದಂಪತಿಗಳು ನಮ್ಮ ಮನೆಗೆ ಬರಬೇಕೆಂದು ಆಹ್ವಾನಿಸಿದ. ಸರಿ ಸಂಜೆವಾಕ್ ಎಂದು ಮನೆಗೆ ಹೋದೆವು. ತುಂಬಾ ಲಕ್ಸುರಿಯಾದ ಮನೆ. ಅಣ್ಣ ತಮ್ಮ ಇಬ್ಬರೂ ಇಂಜಿನಿಯರ್‌ಗಳೇ. ವಿಶೇಷವಾಗಿ ಅಣ್ಣ ನನ್ನ ಗಮನ ಸೆಳೆದನು. ಈಗಿನ ಫಿಲಂ ಫೀಲ್ಡ್‌ನವರು ಹಿಂದೆ ಕೂದಲು ಬಿಡುವಂತೆ ಆತನು ಬಿಟ್ಟಿದ್ದನು. ಆತ ಬಾಂಬೆಯಲ್ಲಿ ಫಿಲಂ ಡೈರೆಕ್ಷನ್ ಫೀಲ್ಡ್‌ನಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಲು ನನಗೆ ಕುತೂಹಲ ಉಂಟಾಯಿತು. ಆಗ ನನಗೆ ತಕ್ಷಣಕ್ಕೆ ಸಿನಿಮಾ ನಿರ್ದೇಶಕ ಸಿದ್ದು ಪೂರ್ಣಚಂದ್ರ ನೆನಪಾದರು. ಅವರು ನಾಗರಬಾವಿಯಲ್ಲಿ ಇರುವುದಾಗಿ ಹೇಳಿದ್ದರು. ಸಿದ್ದುಗೆ ಪೋನ್ ಮಾಡಿದೆ ರಿಸೀವ್ ಆಗಲಿಲ್ಲ. ಇಬ್ಬರನ್ನು ಪರಸ್ಪರ ಪರಿಚಯಿಸೋಣವೆಂದುಕೊಂಡಿದ್ದು ಆಗಲಿಲ್ಲ. ಮಾರನೇ ದಿನ ಬೆಳಿಗ್ಗೆ ಚಿತ್ರನಟ ಮೈಸೂರು ರಮಾನಂದ್ ಮನೆಗೆ ಬಂದರು. ಅವರ ಗೆಜ್ಜೆ ಹೆಜ್ಜೆ ರಂಗತಂಡಕ್ಕೆ 50 ವರ್ಷ ತುಂಬಿದ ನೆನಪಿನಲ್ಲಿ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕ ಪ್ರದರ್ಶನ ಏರ್ಪಡಿಸಿ ನನ್ನನ್ನು ಕರೆದಿದ್ದರು ಹೋಗಲು ಸಾಧ್ಯವಾಗಿರಲಿಲ್ಲ. ಅವರು ಮನೆಗೆ ಬಂದವರೇ ಶಾಲು ಹೊದಿಸಿ ಪ್ರಶಸ್ತಿ ಫಲಕ ನೀಡಿ




ಸನ್ಮಾನಿಸಿದರು. ಇದು ನನಗೆ ಅನಿರೀಕ್ಷಿತ. ಚಿತ್ರನಟರು ತಮ್ಮ ಐವತ್ತು ವರ್ಷಗಳ ರಂಗಸಾಧನೆಯ ಬೃಹತ್ ಆಲ್ಬಂನ್ನು ಬ್ಯಾಗ್‌ನಿಂದ ತೆಗೆದು ತೋರಿಸುತ್ತಾ ಹೋದರು. ಸಿನಿಮಾ ಮತ್ತು ನಾಟಕ ರಂಗ ಈ ಎರಡೂ ಕ್ಷೇತ್ರದಲ್ಲೂ ಅವರ ಸೇವೆ ಅಪಾರ. ಅವರ ಈ ಕಲಾಸೇವೆಯನ್ನು ಕರ್ನಾಟಕ ಸರ್ಕಾರ ಗುರುತಿಸಿ ರಾಜ್ಯದ ರಾಜ್ಯೋತ್ಸವ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಬೇಕು. ಅಷ್ಟೊಂದು ಕಲಾಸಾಧನೆಯ ಪೋಟೋ, ಪತ್ರಿಕಾ ವರದಿ ಅವರ ದೊಡ್ಡ ಆಲ್ಬಂನಲ್ಲಿ ಅಡಕವಾಗಿತ್ತು. ಅವರನ್ನು ಬೀಳ್ಕೊಟ್ಟು ನಾವು ದಂಪತಿಗಳು ಮೈಸೂರಿಗೆ ಹೊರಟೆವು. ಬಸ್ಸಿನಲ್ಲಿ ಮೈಸೂರು ರಮಾನಂದ್ ಅವರ ಆಶಾಜ್ಯೋತಿ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಕಿರು ನಾಟಕ ಕೃತಿ ಓದುತ್ತಿದ್ದೆ ಸಿದ್ದು ಪೂರ್ಣಚಂದ್ರರ ಪೋನ್ ಬಂತು. ಸಾರ್, ನೆನ್ನೆ ನೀವು ನನಗೆ ಪೋನ್ ಮಾಡಿದಾಗ ದಸರಾ ಸಿನಿಮಾ ಫೆಸ್ಟಿವಲ್‌ನಲ್ಲಿ ನನ್ನ ನಿರ್ದೇಶನದ ಪುಟ್ಟಣ್ಣನ ಕತ್ತೆ ಸಿನಿಮಾದ ಸಂವಾದ ಕಾರ್ಯಕ್ರಮದಲ್ಲಿ ಬಿಸಿಯಾಗಿದ್ದೆ ಎಂದರು. ಕೂಡಲೇ ನಾನೀಗ ಮೈಸೂರಿಗೆ ಬರುತ್ತಿದ್ದೇನೆ ಎಂದೆ.

ಹೌದ! ಹಾಗಾದರೆ ಮಾಲ್ ಆಫ್ ಮೈಸೂರ್ ಶಾಪಿಂಗ್ ಕಾಂಪ್ಲೆಕ್ಸ್‌ನ ಐನಾಕ್ಸ್‌ನಲ್ಲಿ ಇಂದು ನಾಲ್ಕು ಗಂಟೆಗೆ ಈ ಪಾದ ಪುಣ್ಯಪಾದ ಸಿನಿಮಾ ಪ್ರದರ್ಶನವಿದೆ ಬನ್ನಿ, ನಿಮ್ಮ ಮೈಸೂರು ಮಿತ್ರರಿಗೂ ಹೇಳಿ.. ಎಂದರು. ಒಂದಿಷ್ಟು ಕವಿಸಾಹಿತಿ ಮಿತ್ರರ ನೆನಪಾಗಿ ಭೇರ್ಯ ರಾಮಕುಮಾರ್, ಕಾಳಿಹುಂಡಿ ಶಿವು, ಎಂಜಿಆರ್ ಆರಸ್, ಹನ್ಯಾಳು ಗೋವಿಂದೇಗೌಡರು, ಎಸ್.ಎಸ್.ಪುಟ್ಟೇಗೌಡರು ಪ್ರಕಾಶಕರು ಓಂಕಾರಪ್ಪ ಹೀಗೆ ಮೈಸೂರು ಮಂದಿಗೆ ಪೋನಾಯಿಸುತ್ತಾ ಹೋದೆ. ಮೈಸೂರು ತಲುಪುವಷ್ಟರಲ್ಲಿ ಪುಟ್ಟೇಗೌಡರು ಮಾತ್ರ ಒಟ್ಟಿಗಾದರು. ನಮ್ಮ ನಾಲ್ಕು ಪಾದಗಳು ನಾಲ್ಕು ಏರೋಲಿಫ್ಟ್ ಮೇಲೆ ಸಾಗಿ ಈ ಪಾದ ಪುಣ್ಯ ಪಾದ ನೋಡಲು ಸೀಟ್‌ನಲ್ಲಿ ಸೆಟಲ್ ಆದವು. ಸಿನಿಮಾ ಕಥಾ ನಾಯಕನ ಪಾದ ಪುಣ್ಯದಾಗಿರಲಿಲ್ಲ ಪಾಪದಿಂದ ಕೂಡಿತ್ತು. ನಾನು ಆನೆಕಾಲು ರೋಗದ ಹೆಸರು ಕೇಳಿದ್ದೆ. ಆದರೆ ಈ ರೋಗ ಸೊಳ್ಳೆಗಳು ಕಚ್ಚಿ ಬರುತ್ತದೆ ಎಂಬ ವಿಚಾರ ತಿಳಿದಿರಲಿಲ್ಲ. ನಿರ್ದೇಶಕ ಪೂರ್ಣಚಂದ್ರ ಎಷ್ಟೊಂದು ಪರಿಪೂರ್ಣವಾಗಿ ಹಳ್ಳಿ ಬದುಕಿನ ನೈಜ ಚಿತ್ರಣವನ್ನು ನಾಜೂಕಾಗಿ ಒಂದು ಸೊಗಸಾದ ಸಿನಿಮಾವಾಗಿಸಿದ್ದಾರಲ್ಲಾ! ಎನಿಸಿತು.

ಆನೆಕಾಲು ರೋಗಕ್ಕೆ ತುತ್ತಾದ ಡ್ರೈವರೊಬ್ಬ ತನ್ನ ತಮ್ಮ ತಂಗಿ ಅಷ್ಟೇ ಏಕೆ ಸ್ವತ: ಪತ್ನಿಯಿಂದ ತಿರಸ್ಕೃತನಾಗಿ ನೋವು ಅನುಭವಿಸುವ ಕಥೆ ಅತ್ಯಂತ ಘನ ಘೋರ! ಇದನ್ನು ತೋರಿಸುತ್ತಲೇ ಒಬ್ಬ ವೈದ್ಯೆಯ ಟಾನಿಕ್‌ನಂತಹ ಸಾಂತ್ವನದ ನುಡಿ, ಆಕೆಯ ಮಾನವೀಯ ನಡೆ ಅಸಹಾಯಕ ಸ್ಥಿತಿಯಲ್ಲಿ ತೊಳಲಾಡುವ ವ್ಯಕ್ತಿ ತನ್ನ ರೋಗಿಷ್ಟ ಪಾದದ ನೋವಿನಲ್ಲೇ ತನ್ನ ಬದುಕನ್ನು ಮತ್ತೇ ಸರಿಪಡಿಸಿಕೊಳ್ಳುವ ಪಾದದ ನಡೆ ಇದೆಯೆಲ್ಲಾ ಅದೇ ಆತ್ಮಸ್ಥೈರ್ಯ! ಆ ನಡೆ ಇಲ್ಲಿ ನಾಟಕೀಯವಾಗಿ ಕಾಣುವುದೇ ಇಲ್ಲ. ಸಿನಿಮಾ ಗೆಲ್ಲುವುದೇ ಇಲ್ಲಿ.

ಸಿನಿಮಾದ ಕೇಂದ್ರ ಬಿಂದು ನಮ್ಮ ಪಾದ. ಈ ಪಾದವನ್ನು ನಮ್ಮ ಬದುಕಿನಲ್ಲಿ ಸಂಸ್ಕೃತಿಯಲ್ಲಿ ನಾನಾ ವಿಧದಲ್ಲಿ ಅರ್ಥೈಸಬಹುದು. ನಾವು ಸ್ವಶಕ್ತಿಯಿಂದ ಎದ್ದು ನಿಲ್ಲಲು ಪಾದ ಬೇಕಷ್ಟೇ! ಮಾನವ ಬದುಕಿನ ಆಧಾರ ಪಾದ. ನಾವು ನಮ್ಮ ತಂದೆತಾಯಿ ಗುರುಹಿರಿಯರಿಗೆ ಪಾದ ಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುತ್ತೇವೆ. ಮನೆಗೆ ಹೊಸದಾಗಿ ಬರುವ ಧರ್ಮಪತ್ನಿ ಬಲಗಾಲಿಟ್ಟು ಬರಲೆಂದು ಆಕೆಯಿಂದ ತುಂಬಿದ ಮನೆ ಶ್ರೇಯೋಭಿವೃದ್ಧಿಯಾಗಲೆಂದು ನಾವು ಬಯಸುತ್ತೇವೆ. ಇದು ನಮ್ಮ ಸಂಸ್ಕೃತಿ ಆಚಾರ ನಂಬಿಕೆ. ಈ ಪಾದವೇ ರೋಗಗ್ರಸ್ಥವಾಗಿ ಸಮಾಜದ ಮನಸ್ಥಿತಿಯೂ ರೋಗಗ್ರಸ್ತವಾದರೇ ರೋಗಿಯ ಪಾಡೇನು? ತಮ್ಮ ತಂಗಿಯರಿಗೆ ಅಸಹ್ಯ ಹುಟ್ಟಿಸಿದ ಈ ಪಾದವನ್ನೇ ಪುಣ್ಯಪಾದವನ್ನಾಗಿಸುವಲ್ಲಿ ನಿರ್ದೇಶಕರ ಜಾಣ್ಮೆಯ ಕಥೆ ನಾಜೂಕಾಗಿ ತೆರೆದುಕೊಳ್ಳುತ್ತದೆ. ಎಲ್ಲೂ ಆಡಂಬರ ಉತ್ಪ್ರೇಕ್ಷ ಇಲ್ಲದೆ ಹಳ್ಳಿಯ ಬದುಕು. ಅಲ್ಲಿಯ ತಿಪ್ಪೆ ಚರಂಡಿ ಗಲೀಜು, ಸೊಳ್ಳೆಗಳ ಕಡಿತಕ್ಕೆ ಡೆಂಗಿ ಜ್ವರ, ಮಲೇರಿಯಾ ಹರಡುವ ಎಚ್ಚರಿಕೆ ಆದರೆ ಇಲ್ಲಿ ಆನೆಕಾಲು ರೋಗಕ್ಕೆ ತುತ್ತಾದ ದಿನೇಶ ಹಳ್ಳಿಗಳಲ್ಲಿ ಕಾಣಸಿಗುವ ಗಾರೆಯಿಲ್ಲದ ಗೋಡೆ ಮನೆಯ ಜಗುಲಿಯಲ್ಲಿ ಅಸಹಾಯಕನಾಗಿ ಕುಳಿತಲ್ಲಿಂದ ಕಥೆ ಆರಂಭವಾಗುತ್ತದೆ. ಈ ಹಳ್ಳಿಗೆ ಆರೋಗ್ಯ ವೀಕ್ಷಣೆಗೆ ಬರುವ ವೈದ್ಯೆಗೆ ಈತನ ವಿಚಾರ ತಿಳಿದು ಆತನನ್ನು ಭೇಟಿಯಾಗಿ ಮಾನವೀಯ ನೆಲೆಯಲ್ಲಿ ನೆರವಾಗಲು ಸಿದ್ಧಳಾಗುತ್ತಾಳೆ. ಇತ್ತ ಗಂಡನನ್ನು ತೊರೆದ ಹೆಂಡತಿ ಡೈವೋರ್ಸ್ ಕೊಡಲು ಹೊರಟರೆ, ತಂಗಿಯ ಮದುವೆಗೆ ಅಣ್ಣನು ಬರಬಾರದೆಂದು ತಂಗಿ ತಮ್ಮನೇ ನಿಷ್ಠೂರವಾಗಿ ವರ್ತಿಸುವಲ್ಲಿ ಆ ಜೀವ ಎಷ್ಟು ನೊಂದಿರಬೇಡ? ಆದರೆ ಮಾನವೀಯ ಮೌಲ್ಯಗಳ ಗುಣನಡತೆಯ ವೈದ್ಯೆ ಆ ಜೀವಕ್ಕೆ ಆತ್ಮವಿಶ್ವಾಸ ತುಂಬುತ್ತಾಳೆ. ಕಡೆಗೆ ತನ್ನ ಟ್ರ್ಯಾಕ್ಟರ್ ಕೀಯನ್ನೇ ಅವನಿಗೆ ಕೊಟ್ಟು ಅದನ್ನು ಓಡಿಸು ನಿನ್ನ ಬದುಕಿಗೆ ಅದೇ ನಿನ್ನ ಪಾದವೇ ದಾರಿ ತೋರಿಸುತ್ತದೆ ಎಂಬ ನಡೆನುಡಿ ಇದೆಯೆಲ್ಲಾ ಅದೇ ಅಲ್ಲವೇ ಸಾರ್ಥಕ್ಯ ಪುಣ್ಯಪಾದ!

ಗಂಡ ಬಿಟ್ಟವಳನ್ನು ಕಟ್ಟಿಕೊಳ್ಳುವೆನೆಂದು ಸುಳ್ಳಿನ ಜಾಲದಲ್ಲಿ ಅವಳ ಶೀಲ ಕೆಡಿಸಲು ಹವಣಿಸುವ ಲಾಯರ್‌ನ ನಡೆ ಮತ್ತು ಟಿವಿ ಧಾರಾವಾಹಿ ನಿರ್ದೇಶಕನನ್ನು ಪ್ರೀತಿಸುತ್ತಿದ್ದ ಇದೇ ವೈದ್ಯೆ ಪರಿಚಯಿಸುವ ನಟಿಯನ್ನೇ ಡೈರೆಕ್ಟರ್ ಮದುವೆಯಾಗಿ ವೈದ್ಯೆಗೆ ಮೋಸ ಮಾಡುವ ಕ್ಯಾರೆಕ್ಟರ್ ಮತ್ತೊಂದು ಕಡೆ ವಿಭಿನ್ನ ನೆಲೆಯಲ್ಲಿ ವಿಮರ್ಶೆಗೆ ಒಳಪಡುತ್ತವೆ. ಕಡೆಗೆ ಇದೇ ವೈದ್ಯೆ ಮನೆಯಲ್ಲಿ ಬಿದ್ದು ತನ್ನೆರಡು ಕಾಲಿಗೆ ಪ್ಲಾಸ್ಟರ್ ಹಾಕಿ ಆಸ್ಪತ್ರೆಯ ಬೆಡ್‌ನಲ್ಲಿ ಮಲಗಿರುವ ದೃಶ್ಯ ಮತ್ತು ಸನ್ಯಾಸಿಯ ಮರಗಾಲು ಪಾದ ಹಿಡಿದು ದೇವರ ಮೊರೆ ಹೋಗಲು ಬೆಟ್ಟ ಹತ್ತುವ ದಿನೇಶ ಈ ದೃಶ್ಯ ನಮ್ಮ ಜೀವನದ ಏಳುಬೀಳುಗಳ ಸಂಕೇತವಾಗಿ ಬಿಂಬಿಸಿದೆ. ಕಡಗೂ ಒಂದಾಗುವ ದಂಪತಿಗಳು ಸೊಳ್ಳೆಗಳಿಂದ ರಕ್ಷಣೆಗೆ ಜನಜಾಗೃತಿ ಮೂಡಿಸಲು ಸೊಳ್ಳೆ ಬ್ಯಾಟ್ ಮತ್ತು ಪರದೆ ಉಚಿತವಾಗಿ ವಿತರಿಸುವಲ್ಲಿಗೆ ಆರೋಗ್ಯ ಸಂರಕ್ಷಣೆ ಹೆಲ್ತ್ ಫಾರ್ ನೇಷನ್ಸ್ ಸಂದೇಶದೊಂದಿಗೆ ಮುಕ್ತಾಯವಾಗುತ್ತದೆ.

ಚಿತ್ರದ ಕಲಾವಿದರಲ್ಲಿ ಆಟೋ ನಾಗರಾಜ್ (ಕಥಾ ನಾಯಕ ದಿನೇಶ್), ವ್ಯೋಮಿ ಸಾಕೆಲ್(ಚೈತ್ರ) (ವೈದ್ಯೆ-ಲಾಲಿತ್ಯ) ತಮ್ಮ ತಮ್ಮ ಪಾತ್ರಗಳ ವಿಶಿಷ್ಟ ಗುಣ ಲಕ್ಷಣಗಳಿಂದ ಪ್ರೇಕ್ಷಕರಿಗೂ ಇಷ್ಟವಾಗಿದ್ದು ಸಂವಾದದಲ್ಲಿ ಗೋಚರಿಸಿತು. ಕೆಲವು ವೈದ್ಯರು ಚಿತ್ರವನ್ನು ಪ್ರಶಂಸಿಸಿದ್ದು ಗಮನಾರ್ಹ. ಚಿತ್ರದ ಉಳಿದ ಪ್ರಮುಖ ಕಲಾವಿದರು ರಶ್ಮಿ, ಮನೋಜ್, ಬೇಬಿ ರಿಧಿ, ಹರೀಶ್ ಕುಂದೂರ್, ಪ್ರಮೀಳಾ ಸುಬ್ರಮಣ್ಯ, ಬಲರಾಜವಾಡಿ. ಛಾಯಾಗ್ರಾಹಕರು ರಾಜು ಹೆಮ್ಮಿಗೇಪುರ, ಹಿನ್ನೆಲೆ ಸಂಗೀತ ಅನಂತ್ ಆರ್ಯನ್. ಸಂಕಲನ: ದೀಪು ಸಿ.ಎಸ್. ನಿರ್ಮಾಣ ಪೂರ್ಣಚಂದ್ರ ಫಿಲಂಸ್. ಕಥೆ, ಚಿತ್ರಕತೆ, ಸಂಭಾಷಣೆ, ನಿರ್ದೇಶನ ಸಿದ್ದು ಪೂರ್ಣಚಂದ್ರ.

**- ಗೊರೂರು ಅನಂತರಾಜು, ಹಾಸನ, ಮೊ: 9449462879,** ವಿಳಾಸ: ಹುಣಸಿನಕೆರೆ ಬಡಾವಣೆ, 29ನೇ ವಾರ್ಡ್, 3ನೇ ಕ್ರಾಸ್, ಶ್ರೀ ಶನೀಶ್ವರ ದೇವಸ್ಥಾನ ರಸ್ತೆ, ಹಾಸನ.

## ನೋವು

ಕಾಲೆಡವಿ ಬಿದ್ದಾಗ, ಆಟ ಓಟದಲ್ಲಿ ಜಾರಿ ಬಿದ್ದಾಗ, ಎತ್ತರದಿಂದ ಕೆಳಗೆ ಜಿಗಿದಾಗ, ಮರದ ರೆಂಬೆ ಅಪ್ಪಳಿಸಿದಾಗ, ಯಾವುದಾದರೂ ಉಪಕರಣಗಳು ತಾಗಿದಾಗ... ಹೀಗೆ ಅನೇಕ ಸಂದರ್ಭಗಳಲ್ಲಿ ನೋವು ಸಹಜ. ಇಂತಹ ಸಂದರ್ಭಗಳಲ್ಲಿ ನೋವುಗಳುಂಟಾದರೂ ಅವುಗಳಿಂದಾಗಿ ನಾವು ಜಾಗರೂಕತೆಯ ಪಾಠವನ್ನು ಕಲಿಯುತ್ತೇವೆ. ಅಂಗವೊಂದು ಊನವಾದರೂ ಅದನ್ನು ಇಂದಿನ ವೈದ್ಯಕೀಯ ಶಾಸ್ತ್ರ ಮರುಜೋಡಿಸುವ ಹಲವು ಸಂದರ್ಭಗಳಿವೆ.

ದೊಣ್ಣೆಯ ಪೆಟ್ಟಿನ ಗಾಯ ಮಾಸುತ್ತದೆ, ಆದರೆ ಮನಸ್ಸಿಗಾದ ಮಾತಿನ ಗಾಯದ ನೋವಿಗೆ ಅಳಿವಿಲ್ಲ ಎನ್ನುತ್ತಾರೆ. ಮನಸ್ಸಿಗೆ ನೋವಾಗುವ ಅನೇಕ ಸಂದರ್ಭಗಳಿರುತ್ತವೆ. ದೇಹಕ್ಕುಂಟಾದ ನೋವನ್ನು ಒಂದು ಬಾರಿ ಅನುಭವಿಸಿದರೆ ಮುಗಿಯುತ್ತದೆ. ಅಂತಹ ನೋವುಗಳಾಗದಂತೆ ಎಚ್ಚರಿಕೆಯನ್ನೂ ವಹಿಸಬಹುದು. ಆದರೆ ಮನಸ್ಸಿಗೆ ಆದ ನೋವು ಮುಂದೆ ಎಷ್ಟೇ ಎಚ್ಚರಿಕೆ ವಹಿಸಿದರೂ, ಆ ನೋವು ಶಾಶ್ವತವಾಗುಳಿಯುತ್ತದೆ. ಆ ನೋವು ಎಂದಿಗೂ ಅಳಿಯದು.


ನಮ್ಮ ದೇಹದ ನೋವಿಗೆ ನಾವೇ ಹೆಚ್ಚಿನ ಸಂದರ್ಭಗಳಲ್ಲಿ ಕಾರಣರಾಗುತ್ತೇವೆ. ನಮ್ಮ ಅಜಾಗರೂಕತೆಗಳು ನಮಗೆ ನೋವು ತರುತ್ತವೆ. ತರಕಾರಿ ಅಥವಾ ಹಣ್ಣುಗಳನ್ನು ಕೊಯ್ಯುವಾಗ ಕತ್ತಿಯ ಗಾಯವಾಗುತ್ತದೆ. ಎಡವಿ ಬೀಳುತ್ತೇವೆ, ನೋವಾಗುತ್ತದೆ. ಇಂತಹ ಸಂದರ್ಭದ ನೋವುಗಳಿಗೆ ನಾವೇ ಕಾರಣರು. ಕಳ್ಳತನ ಮಾಡಿದುದಕ್ಕೆ ಪೋಲೀಸರು ಹೊಡೆದರೆ ನೋವಾಗುತ್ತದೆ. ಈ ನೋವೂ ನಮ್ಮ ಕಾರಣದಿಂದ ಎಂಬುದನ್ನು ಮರೆಯಬಾರದು. ಹಾಗೆಯೇ ಅನೇಕ ಸಂದರ್ಭಗಳಲ್ಲಿ ನಮ್ಮ ಮನಸ್ಸಿಗಾಗಿರುವ ನೋವಿನ ಹಿಂದೆಯೂ ನಮ್ಮ ಅಕೃತ್ಯಗಳಿರುತ್ತವೆ. ಮನಸ್ಸಿನ ನೋವು ಮತ್ತು ದೇಹದ ನೋವು ಇವೆರಡೂ ಅಜಾಗರೂಕತೆ ಅಥವಾ ಮನೋ ಹಿಡಿತದ ಸಡಿಲವೇ ಕಾರಣ. ಹಲ್ಲು ನೋವು, ಹೊಟ್ಟೆ ನೋವು, ಮಂಡಿ ನೋವು ಮುಂತಾದ ನೋವುಗಳಿಗೂ ನಾವೇ ಕಾರಣರು. ನಮ್ಮ ಆಹಾರ, ವಿಹಾರ, ಸ್ವಚ್ಛತೆಯ ದೋಷಗಳಿಂದಾಗಿ ದೈಹಿಕ ನೋವುಗಳಾಗುವುದೂ ಇದೆಯಂತಾಯಿತಲ್ಲವೇ?

ನಮ್ಮಿಂದ ತಪ್ಪುಗಳು ಘಟಿಸದೇ ಇದ್ದಾಗ ಯಾರಾದರು ಮಾತನಾಡಿದರೆ ಮನನೋಯುವುದಿದೆ. ಇಂತಹ ಸಂದರ್ಭಗಳಲ್ಲಿ ಮಾತನಾಡುವವರು ವಿಷಯದ ಸರಿಯಾದ ಮಾಹಿತಿ ಪಡೆಯದೇ ಮಾತನಾಡುವುದರಿಂದಾಗುವ ರಾದ್ಧಾಂತವಿದು. ತಾನು ಮಾತನಾಡಿರುವುದು ತಪ್ಪೆಂದರಿತಾಗ, ಮಾತನಾಡಿದವರೇ ನೋಯುವುದೂ ಇದೆ. ಇದನ್ನು ಪಶ್ಚಾತ್ತಾಪ ಎನ್ನುವರು. ಇಂತಹ ಸಂದರ್ಭಗಳಲ್ಲಿ ತನ್ನ ಅವಿವೇಕದ ಮಾತುಗಳಿಗೆ ಕ್ಷಮೆ ಕೇಳಿದರೆ ಸಮಸ್ಯೆ ಪರಿಹಾರವಾದರೂ ಆಗಬಹುದು. ಮನಸ್ಸಿಗಾದ ಗಾಯ ಅಳಿಯುವುದು ಕಷ್ಟವಾದರೂ ಪುಟ್ಟ ಸಾಂತ್ವಾನ ಸಿಕ್ಕಿದಂತಾಗುತ್ತದೆ ತಾನೇ?

ತಾನು ವಿಶ್ವಾಸವಿರಿಸಿದವರು ತನಗೇ ತಿರುಮಂತ್ರ ಹೂಡಿದಾಗ ನೋವಾಗುವುದು ಇನ್ನೊಂದು ಬಗೆಯದು. ಇಲ್ಲೂ ವಿಶ್ವಾಸಘಾತಕ್ಕೊಳಗಾದ ನಾವೂ ಆ ನೋವಿಗೆ ಕಾರಣರಾಗುವುದಿದೆ. ಯಾರನ್ನೇ ಆದರೂ ವಿಶ್ವಸಿಸುವ ಮೊದಲು ನಮಗೆ ಆ ವ್ಯಕ್ತಿಯ ಒಳನೋಟ ಅಥವಾ ಸರಿಯಾದ ಪರಿಚಯ ಇರಬೇಕು. ಬಾಹ್ಯವಾಗಿ ಬೆಣ್ಣೆಯಂತಿರುವ, ಬೆನ್ನ ಹಿಂದಿನಿಂದ ಚೂರಿಯಿಡುವ ಮನೋಭಾವದವರನ್ನು ವಿಶ್ವಸಿಸಲೇ ಬಾರದು. ಯಾರನ್ನೇ ಆಗಲಿ ತಕ್ಷಣಕ್ಕೆ ನಮ್ಮ ಜೊತೆಗೊಳಿಸಬಾರದು. ಅವರ ಪೂರ್ವಾಪರ ಅರ್ಥವಾಗುವ ತನಕ ಕಾಯಲೇ ಬೇಕು. ಆಗ ಅವರಿಂದಾಗುವ ನೋವುಗಳಿಂದ ಪಾರಾಗಬಹುದು.

ನಾವು ಕೈಗೆತ್ತಿದ ಯೋಜನೆ, ಹೂಡಿದ ಹಣಕಾಸು ಪರಿಣಾಮಕಾರಿಯಾದ ಫಲವನ್ನು ನೀಡದೇ ಇದ್ದಾಗಲೂ ಮನಸ್ಸಿಗೆ ನೋವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಸದ್ಗುಣೀ ಅನುಭವಿಗಳ ಸಲಹೆಯೊಂದಿಗೆ ಮುಂದುವರಿಯುವುದರೊಂದಿಗೆ ನೋವುಗಳಾಗದಂತೆ ಎಚ್ಚರದಿಂದಿರಬಹುದು. ಪರೀಕ್ಷೆಯಲ್ಲಿ ಅಂಕ ಬರಲಿಲ್ಲ, ಉತ್ತೀರ್ಣನಾಗಲಿಲ್ಲ ಎಂದಾದಾಗ ನೋವು ಸಹಜ. ಆದರೆ ಸಮಯ ವ್ಯರ್ಥಗೊಳಿಸಿ ಕಲಿಕೆಯಲ್ಲಿ ತೊಡಗದಿರುವ ನಮ್ಮ ತಪ್ಪು ಧಕ್ಕೆ ಕಾರಣವೆಂಬ ಸತ್ಯ ನಮಗೆ ಗೊತ್ತೇ ಇರುತ್ತದೆ. ಮನಸ್ಸು ಮಾಡಿದರೆ ಇಂತಹ ನೋವುಗಳೂ ಆಗದಂತೆ ನಮ್ಮ ನಡೆಯಿಡಬಹುದು. ಎಲ್ಲಾ ಬಗೆಯ ನೋವುಗಳಿಗೂ ಮುಂಜಾಗರೂಕತೆಯೇ ಪರಿಹಾರ.

**- ರಮೇಶ ಎಂ. ಬಾಯಾರು** ಬಂಟ್ವಾಳ



## ಜಿಪುಣ

ಹೊಸ ಹೋಟೆಲ್ ಹೊಕ್ಕ ಜಿಪುಣ ಗಾಂಪ ಕೇಳಿದ, ಏನಪ್ಪ ಈ ಹೋಟೆಲ್‌ನಲ್ಲಿ ಎಲ್ಲಕ್ಕಿಂತ ಅಗ್ಗ ಯಾವುದು?


ಅವನ ಮುಖವನ್ನೇ ಪೆಕರುಪೆಕರಾಗಿ ನೋಡುತ್ತಾ ಮಾಣಿ ಉತ್ತರಿಸಿದ, ಅದೇ. ನೀರು!

ಹಾಗಿದ್ದರೆ 2 ಗ್ಲಾಸ್ ನೀರು ಕೊಡಪ್ಪ, ಎಂದು ಜಿಪುಣಾಗ್ರೇಸ ಗಾಂಪ ತನ್ನ ಜೇಬು ಸವರಿಕೊಂಡ.

## ದಂಡ

ಗಾಂಪ: ಅಪ್ಪ, ಐವತ್ತು ರೂಪಾಯಿ ಕೊಡು. ಇವತ್ತು ಶಾಲೆಗೆ ಹೋಗಲು ತಡವಾಯ್ತು ಅಂತ ದಂಡ ಹಾಕಿದ್ದಾರೆ.

ಅಪ್ಪ : ಪರವಾಗಿಲ್ಲ, ನಾಳೆ ಅರ್ಧ ಗಂಟೆ ಬೇಗನೆ ಶಾಲೆಗೆ ಹೋಗಿಬಿಡು, ಅವರೇ ನಿನಗೆ ಐವತ್ತು ರೂಪಾಯಿ ಕೊಡ್ತಾರೆ.




# ಚುನಾವಣಾ ಆಯೋಗದಿಂದ ಹೊಸ ಬದಲಾವಣೆ

## ಇವಿಎಂಗಳಲ್ಲಿ ಅಭ್ಯರ್ಥಿಗಳ ಬಣ್ಣದ ಫೋಟೋ

• ಪ್ರಜೋದಯ ವರದಿ

**ನವದೆಹಲಿ:** ಬಿಹಾರ ವಿಧಾನಸಭಾ ಚುನಾವಣೆಯಿಂದ ಪ್ರಾರಂಭಿಸಿ, ಇನ್ನು ಮುಂದೆ ಎಲೆಕ್ಟ್ರಾನಿಕ್ ಮತಯಂತ್ರಗಳು (ಇವಿಎಂ) ಅಭ್ಯರ್ಥಿಗಳ ಬಣ್ಣದ ಫೋಟೋ ಗಳನ್ನು ಹೊಂದಿರುತ್ತವೆ ಎಂದು ಕೇಂದ್ರ ಚುನಾವಣಾ ಆಯೋಗ ಬುಧವಾರ ತಿಳಿಸಿದೆ.

2015 ರಿಂದ, ಇವಿಎಂ ಮತಪತ್ರಗಳಲ್ಲಿ ಅಭ್ಯರ್ಥಿಗಳ ಕಪ್ಪು ಮತ್ತು ಬಿಳಿ ಫೋಟೋಗಳನ್ನು ಅಂಟಿಸಲಾಗುತ್ತಿದೆ. ಇದನ್ನು ಗುರುತಿಸಲು ಹಲವು ಮತದಾರರಿಗೆ ಕಷ್ಟವಾಗುತ್ತಿದೆ. ಹೀಗಾಗಿ ಚುನಾವಣಾ ಆಯೋಗ ಇದೇ ಮೊದಲ ಬಾರಿಗೆ ಮತಪತ್ರಗಳಲ್ಲಿ ಬದಲಾವಣೆ ತರಲು ಮುಂದಾಗಿದ್ದು, ಸುಲಭವಾಗಿ ಓದಲು ಮತ್ತು ಮತದಾರ ಸ್ನೇಹಿ ಮತಪತ್ರಗಳ ಬಿಡುಗಡೆಗೆ ಕ್ರಮ ಕೈಗೊಂಡಿದೆ. ಇದು ಬಿಹಾರ ವಿಧಾನಸಭೆ ಚುನಾವಣೆಯಿಂದಲೇ ಅನ್ವಯವಾಗಲಿದೆ.



ಸರಣಿ ಸಂಖ್ಯೆಯನ್ನು ಯಂತ್ರಗಳಲ್ಲಿ ಹೆಚ್ಚು ಪ್ರಮುಖವಾಗಿ ಪ್ರದರ್ಶಿಸಲಾಗುತ್ತದೆ ಎಂದು ಭಾರತ ಚುನಾವಣಾ ಆಯೋಗ ತಿಳಿಸಿದೆ.

ಇವಿಎಂ ಮತಪತ್ರಗಳ ವಿನ್ಯಾಸ ಮತ್ತು ಮುದ್ರಣದ ಸ್ಪಷ್ಟತೆ ಮತ್ತು ಓದುವಿಕೆಯನ್ನು ಹೆಚ್ಚಿಸಲು 1961ರ ಚುನಾವಣಾ ನೀತಿ ನಿಯಮಗಳು, ಸೆಕ್ಷನ್ 49 ಬಿ ಅಡಿಯಲ್ಲಿ ಅಸ್ತಿತ್ವದಲ್ಲಿರುವ ಮಾರ್ಗಸೂಚಿಗಳನ್ನು ಪರಿಷ್ಕರಿಸಲಾಗಿದೆ ಎಂದು ಚುನಾವಣಾ ಆಯೋಗ ತಿಳಿಸಿದೆ.

ಇನ್ನು ಮುಂದೆ, ಅಭ್ಯರ್ಥಿಗಳ ಛಾಯಾಚಿತ್ರಗಳನ್ನು ಇವಿಎಂ ಮತಪತ್ರದಲ್ಲಿ ಬಣ್ಣದಲ್ಲಿ ಮುದ್ರಿಸಲಾಗುತ್ತದೆ. ಅಭ್ಯರ್ಥಿಯ ಮುಖವು ಸ್ಪಷ್ಟವಾಗಿ ಕಾಣಲು ಫೋಟೋ ಜಾಗದ ನಾಲ್ಕನೇ ಮೂರು ಭಾಗವನ್ನು ಆಕ್ರಮಿಸಿಕೊಂಡಿರುತ್ತದೆ ಎಂದು ಆಯೋಗ ಹೇಳಿದೆ.

ಎಲ್ಲಾ ಅಭ್ಯರ್ಥಿಗಳ ಹೆಸರು, ಸರಣಿ ಸಂಖ್ಯೆಗಳು ಮತ್ತು ನೋಟಾ ಆಯ್ಕೆಯ ಅಕ್ಷರ ಗಾತ್ರ 30 ಇರಲಿದ್ದು, ಇವು ದಪ್ಪ ಅಕ್ಷಗಳಲ್ಲಿ ಮತ್ತು ಸ್ಪಷ್ಟವಾಗಿರಲಿವೆ ಎಂದು ಚುನಾವಣಾ ಆಯೋಗ ತಿಳಿಸಿದೆ.

# ಕಾಂಗ್ರೆಸ್‌ನಿಂದ ವೋಟ್ ಚೋರಿ ಮಾಫಿಯಾ

• ಪ್ರಜೋದಯ ವರದಿ

**ಬೆಂಗಳೂರು:** ಕೋಲಾರ ಜಿಲ್ಲೆಯ ಮಾಲೂರು ಕ್ಷೇತ್ರವನ್ನು ಪ್ರತಿನಿಧಿಸುವ ಕಾಂಗ್ರೆಸ್ ಶಾಸಕ ಕೆವೈ ನಂಜೇಗೌಡ ಅವರ ಆಯ್ಕೆಯನ್ನು ಕರ್ನಾಟಕ ಹೈಕೋರ್ಟ್ ಮಂಗಳವಾರ ಅನೂರ್ಜಿತಗೊಳಿಸಿದ್ದು, ಬಿಜೆಪಿ ನಾಯಕ ಆರ್.ಅಶೋಕ್, ರಾಜ್ಯದಲ್ಲಿ ಆಡಳಿತ ಪಕ್ಷವು 'ವೋಟ್ ಚೋರಿ ಮಾಫಿಯಾ' ನಡೆಸುತ್ತಿದೆ ಎಂದು ಬುಧವಾರ ಆರೋಪಿಸಿದ್ದಾರೆ.

ನಂಜೇಗೌಡ ವಿರುದ್ಧ ಸೋತಿದ್ದ ಬಿಜೆಪಿಯ ಕೆ.ಎಸ್.ಮಂಜುನಾಥ್ ಗೌಡ ಸಲ್ಲಿಸಿದ್ದ ಚುನಾವಣಾ ತಕರಾರು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್ ದೇವದಾಸ್ ನೇತೃತ್ವದ ಪೀಠ ಈ ತೀರ್ಪು ನೀಡಿದೆ.

ನಾಲ್ಕು ವಾರಗಳಲ್ಲಿ ಮತಗಳ ಮರುಎಣಿಕೆ ಮಾಡಿ, ಫಲಿತಾಂಶವನ್ನು ಹೊಸದಾಗಿ ಘೋಷಿಸುವಂತೆ ಚುನಾವಣಾ ಆಯೋಗಕ್ಕೆ ಪೀಠ ನಿರ್ದೇಶನ ನೀಡಿದೆ. ಆದಾಗ್ಯೂ, ನಂಜೇಗೌಡ ಅವರ ಪರ ವಕೀಲರ ಮನವಿ ಮೇರೆಗೆ, ಶಾಸಕ ಸ್ಥಾನವನ್ನು ಅಸಿಂಧುಗೊಳಿಸಿದ್ದ ತನ್ನದೇ ಆದೇಶಕ್ಕೆ 30 ದಿನಗಳ ಕಾಲ ಹೈಕೋರ್ಟ್ ತಡೆ ನೀಡಿದೆ. ಈ ಮಧ್ಯಂತರ ಪರಿಹಾರವು ಕಾಂಗ್ರೆಸ್ ಶಾಸಕರಿಗೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಅವಕಾಶ ನೀಡುತ್ತದೆ

'ಕಾಂಗ್ರೆಸ್ = ವೋಟ್ ಚೋರಿ ಮಾಫಿಯಾ. ಬಳ್ಳಾರಿಯಿಂದ ಮಾಲೂರುವರೆಗೆ, ಒಂದು ಮಾದರಿ ಎಂದಿಗೂ ಬದಲಾಗುವುದಿಲ್ಲ - ಮತಗಟ್ಟೆಯನ್ನು ರಿಗ್ ಮಾಡಿ, ಮತವನ್ನು ಕದಿಯಿರಿ, ಪ್ರಜಾಪ್ರಭುತ್ವವನ್ನು ಕೊಲೆ ಮಾಡಲಾಗುತ್ತಿದೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕರೂ ಆಗಿರುವ ಅಶೋಕ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಹುಲ್ ಗಾಂಧಿ ಪ್ರಜಾಪ್ರಭುತ್ವ ಉಳಿಸಿ ಎಂಬ ನಾಟಕ ಮಾಡುತ್ತಿದ್ದರೆ, ಸಿಎಂ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಕರ್ನಾಟಕದಲ್ಲಿ ವೋಟ್ ಚೋರಿ ಮಾಫಿಯಾ ನಡೆಸುತ್ತಿದ್ದಾರೆ. ಹೈಕೋರ್ಟ್ ಈಗ ಅವರ ಮಾಲೂರು ಶಾಸಕರ ಕದ್ದ ಗೆಲುವಿಗೆ ಮೊಳೆ ಹೊಡೆದಿದೆ. ಕಾಂಗ್ರೆಸ್‌ನ ನೈತಿಕತೆಯ ಮುಖವಾಡ ಕಳಚಿದೆ. ಕರ್ನಾಟಕ ಶೀಘ್ರದಲ್ಲೇ ಈ ಮಾಫಿಯಾಕ್ಕೆ ಬಾಗಿಲು ತೆರೆಯುತ್ತದೆ!' ಎಂದು ಅವರು ಹೇಳಿದರು.

# ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹಿರೀಸಾವೆ ಗ್ರಾಮದ ವಿಶ್ವಕರ್ಮ ಸಮಾಜದ ವತಿಯಿಂದ ಕಾಳಿಕಾಂಬ ದೇವಸ್ಥಾನದಲ್ಲಿ ಏರ್ಪಡಿಸಿದ್ದ ವಿಶ್ವಕರ್ಮ ಜನ್ಮದಿನಾಚರಣೆಯಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

2024- 25ನೇ ಸಾಲಿನಲ್ಲಿ ಎಸ್ಎಸ್ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿರುವ ವಿದ್ಯಾರ್ಥಿಗಳಾದ ಎಮ್.ಲಕ್ಷ್ಮಿ, ಕೆ.ಪಿ. ಮನೋಜ್, ಎಚ್.ಪಿ. ಪ್ರೀತಿ, ಕೆ.ನಂದನ್‌ಕುಮಾರ್, ಪಿ.ಕಿಶೋರ್, ಎಲ್.ಭ್ರಮ್ಮೇಶ್ ಅವರುಗಳನ್ನು ಸಂಘದ ಅಧ್ಯಕ್ಷ ಸಿ.ಪಿ. ನಾಗೇಂದ್ರ ನೇತೃತ್ವದಲ್ಲಿ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಬೆಳಿಗ್ಗೆ ವಿಶ್ವಕರ್ಮರ ಪ್ರತಿಮೆ, ಕಾಳಿಕಾಂಬ ದೇವಿ, ಕಮಟೇಶ್ವರ ದೇವರುಗಳಿಗೆ ಅಭಿಷೇಕ ಹಾಗೂ ವಿಶೇಷ ಪೂಜೆಗಳನ್ನು ಸಲ್ಲಿಸಿದರು. ವಿಶ್ವಕರ್ಮ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಶೈಲಶ್ರೀ, ಸಂಘದ ಪದಾಧಿಕಾರಿಗಳಾದ ಗಣೇಶಾಚಾರ್, ದೇವರಾಜು, ಪರಮೇಶ್, ಎ.ಪಿ. ಬಸವರಾಜು ಮತ್ತು ಎಲ್ಲ ಘಟಕದ ಪದಾಧಿಕಾರಿಗಳು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಹಿರೀಸಾವೆ ಸೆಸ್ಕ್ ಶಾಖಾಧಿಕಾರಿ ವೆಂಕಟೇಶ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಜೆ. ಮಹೇಶ್, ನಿರ್ದೇಶಕ ಬೋರೇಗೌಡ, ಜನಪ್ರತಿನಿಧಿಗಳಾದ ಎಚ್.ಕೆ. ವೆಂಕಟೇಶ್, ಕರವೇ ಮಹೇಶ್, ಲೋಕೇಶ್, ರೊಡ್ ಮಂಜುನಾಥ್, ಎನ್‌ಎಚ್ಆರ್ ಐಸಿ ರಾಶಿಗೌಡ, ಕರವೇ ಹೋಬಳಿ ಘಟಕದ ಅಧ್ಯಕ್ಷ ಶಿವರಾಜು ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಇಂದು-ನಾಳೆ ವಿದ್ಯುತ್ ವ್ಯತ್ಯಯ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಸೆ.18 ರಂದು 66/11ಕೆ.ವಿ ಮಗ್ಗೆ ವಿ.ವಿ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆ ಯವರೆಗೆ 66/11ಕೆ.ವಿ ಮಗ್ಗೆ ವಿ.ವಿ. ಕೇಂದ್ರ ವಿದ್ಯುತ್ ಸರಬರಾಜಾಗುವ ಕಾರಗೋಡು, ಮಗ್ಗೆ, ಚನ್ನಾಪುರ, ಗಂಗಾರ ಮತ್ತು ಪಾಳ್ಯ ಮಾರ್ಗ ಗಳಿಂದ ವಿದ್ಯುತ್ ಸರಬರಾಜಾಗುವ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಸೆ.19 ರಂದು 66/11ಕೆ.ವಿ ಚಿಕ್ಕಕೊಂಡಗೊಳ ವಿ.ವಿ ಕೇಂದ್ರದಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ, ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆ ಯವರೆಗೆ ಚಿಕ್ಕಕೊಂಡಗೊಳ ವಿ.ವಿ. ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ವಿದ್ಯಾನಗರ, ಚಿಕ್ಕಹೊನ್ನೇನಹಳ್ಳಿ, ಎಂ.ಸಿ.ಎಫ್ ಕ್ವಾಟ್ರಸ್, ಹರಳಹಳ್ಳಿ, ಗುಂಡೇಗೌಡನಕೊಪ್ಪಲು, ಎಂ.ಜಿ.ರಸ್ತೆ, ಮಾವಿನಹಳ್ಳಿ, ರಿಂಗ್ ರಸ್ತೆ, ಜಯನಗರ, ಆಕಾಶವಾಣಿ, ಸರ್ಕಾರಿ ವಿಜ್ಞಾನ ಕಾಲೇಜು, ಆರ್.ಸಿ. ರಸ್ತೆ, ರಂಗೋಲಿಹಳ್ಳ, ಉತ್ತರ ಬಡಾವಣೆ, ಸದಾಶಿವನಗರ, ಪೆನ್ಷನ್ ಮೊಹಲ್ಲ, 80ಫೀಟ್ ರಸ್ತೆ, ರಾಜ್‌ಕುಮಾರ್ ನಗರ, ಹೇಮಾವತಿ ನಗರ ಮತ್ತು ಕಬ್ಬಳ್ಳಿ ಹಾಗೂ ಸುತ್ತಮುತ್ತಲ ಪ್ರದೇಶಗಳ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕವಿಪ್ರನಿನಿ, ಹಾಸನ ಕಾರ್ಯಾಚರಣೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ತಿಳಿಸಿದ್ದಾರೆ.

# ಪ್ರಧಾನಿ ಮೋದಿ ಹುಟ್ಟುಹಬ್ಬ: ಅನ್ನ ಸಂತರ್ಪಣೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದೇಶದ ಹೆಮ್ಮೆಯ ಪ್ರಧಾನಮಂತ್ರಿ ನರೇಂದ್ರ ಮೋದಿಯವರಿಗೆ 75ನೇ ಹುಟ್ಟಹಬ್ಬ ಆಚರಿಸಿಕೊಳ್ಳುತ್ತಿರುವ ಹಿನ್ನಲೆಯಲ್ಲಿ ಪಟ್ಟಣದಲ್ಲಿ ಬಿಜೆಪಿ ಪಕ್ಷವು ಮುಖಂಡ ಸಿ.ಆರ್.ಚಿದಾನಂದ್ ನೇತೃತ್ವದಲ್ಲಿ ಮೋದಿಯವರ 75ನೇ ಹುಟ್ಟಹಬ್ಬದ ಸಲುವಾಗಿ ದೇವಾಲಯಗಳಲ್ಲಿ ಪೂಜೆ, ರೋಗಿಗಳಿಗೆ ಹಣ್ಣು, ಬ್ರೆಡ್ ವಿತರಣೆ, ಮತ್ತು ಸಾರ್ವಜನಿಕರಿಗೆ ಅನ್ನದಾನ ನಡೆಸಲಾಯಿತು.

ಸತತ ಮೂರನೇ ಅವಧಿಗೆ ಪ್ರಧಾನಿಯಾಗಿ ದೇಶವನ್ನು ಅಭಿವೃದ್ಧಿಯ ಉತ್ತುಂಗಕ್ಕೆ ಕೊಂಡೊಯ್ಯುತ್ತಿರುವ ನರೇಂದ್ರ ಮೋದಿಯವರ 75ನೇ ವರ್ಷದ ಹುಟ್ಟುಹಬ್ಬವನ್ನು ದೇಶದೆಲ್ಲೆಡೆ ಆಚರಿಸಲಾಗುತ್ತಿದೆ. ಅದೇ ರೀತಿ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದಲ್ಲಿಯೂ ಮೋದಿಯವರ ಹುಟ್ಟಹಬ್ಬವನ್ನು ಬಿಜೆಪಿ ಪಕ್ಷ ಮತ್ತು ಅವರ ಅಭಿಮಾನಿಗಳು ಆಚರಣೆ ಮಾಡಿದ್ದು, ಬಿಜೆಪಿ ಮುಖಂಡ ಸಿ.ಆರ್.ಚಿದಾನಂದ್ ನೇತೃತ್ವದಲ್ಲಿ ನೂರಾರು ಪಕ್ಷದ ಕಾರ್ಯಕರ್ತರು,



ಪಟ್ಟಣದ 40 ಅಡಿ ಅಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಮೋದಿಯವರ ಹೆಸರಿನಲ್ಲಿ ಪೂಜೆ ಸಲ್ಲಿಸಿ, ನಂತರ ದೇವಸ್ಥಾನದ ಆವರಣದಲ್ಲಿ ಆಗಮಿಸಿದ ಕಾರ್ಯಕರ್ತರು ಮತ್ತು ಅವರ ಅಭಿಮಾನಿಗಳು, ಸಾರ್ವಜನಿಕರಿಗೆ ಬೆಳಗ್ಗಿನ ಫಲಹಾರ ವಿತರಿಸಲಾಯಿತು.

ಮುಖಂಡ ಸಿ.ಆರ್.ಚಿದಾನಂದ್ ಮಾತನಾಡಿ, ದೇಶವನ್ನು ಜಾಗತಿಕ ಮಟ್ಟದಲ್ಲಿ ಅತ್ಯುನ್ನತ ಮಟ್ಟಕ್ಕೆ ಕೊಂಡೊಯ್ಯುತ್ತಿರುವ ನರೇಂದ್ರ ಮೋದಿಯವರ ಹುಟ್ಟುಹಬ್ಬ ಆಚರಿಸುತ್ತಿರುವುದು ಅವರ ಅಭಿಮಾನಿಯಾಗಿ ನನಗೆ ಖುಷಿ ತಂದಿದೆ ಎಂದರು.

ಅನ್ನಸಂತರ್ಪಣೆ ಕಾರ್ಯದಲ್ಲಿ ಗಣಪತಿ ಸೇವಾಸಮಿತಿ ಕಾರ್ಯದರ್ಶಿ ಸತ್ಯನಾರಾಯಣ್, ಮುಖಂಡರಾದ ತಾಲ್ಲೂಕು ಅಧ್ಯಕ್ಷ ಪರಮ ಗಂಗಾಧರ್, ಪ್ರಧಾನ ಕಾರ್ಯದರ್ಶಿ ಧರಣೇಶ್, ಎ.ಆರ್.ನಾಗರಾಜ್, ನಂಜುಂಡ ಮೈಮ್, ಜಗದೀಶ್, ರಂಗೇಗೌಡ, ರೂಪೇಶ್, ವಿಶ್ವನಾಥ್, ಮಂಜುನಾಥ್, ಗುಂಡಶೆಟ್ಟಿಹಳ್ಳಿ ಬಸವ, ಅಶೋಕ್, ಕಾರ್ತಿಕ್, ಇತರರಿದ್ದರು.

# ಕಾಂಗ್ರೆಸ್‌ನ ಕಟ್ಟುಕತೆ ಮುರಿದ ನರೇಂದ್ರ ಮೋದಿ

• ಪ್ರಜೋದಯ ವರದಿ

**ಬೆಂಗಳೂರು:** ಪ್ರಧಾನಿ ನರೇಂದ್ರ ಮೋದಿಯವರಿಗೆ 75ನೇ ಹುಟ್ಟುಹಬ್ಬದ ಶುಭಾಶಯ ಕೋರಿದ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ, ಕಾಂಗ್ರೆಸ್ ಪಕ್ಷ ಮಾತ್ರ ರಾಷ್ಟ್ರದ ಏಕತೆ, ಸ್ಥಿರತೆ ಮತ್ತು ಉತ್ತಮ ಆಡಳಿತ ನೀಡುವ ಸಾಮರ್ಥ್ಯ ಹೊಂದಿದೆ ಎಂಬ ಕಟ್ಟುಕತೆಯನ್ನು ದೇಶದ ಪ್ರಧಾನಿ ನರೇಂದ್ರ ಮೋದಿ ಛಿದ್ರಗೊಳಿಸಿದ್ದಾರೆ ಎಂದು ಬುಧವಾರ ಹೇಳಿದ್ದಾರೆ.

ಭಾರತೀಯರಲ್ಲಿ ಸಾಂಸ್ಕೃತಿಕ ಗುರುತು ಮತ್ತು ಸ್ವಾತಂತ್ರ್ಯದ ಪ್ರಜ್ಞೆಯನ್ನು ಬೆಳೆಸಿದ ಕೀರ್ತಿ ಮೋದಿ ಅವರಿಗೆ ಸಲ್ಲುತ್ತದೆ ಎಂದು ಹೇಳಿರುವ ಅವರು, ನಿಮ್ಮ 75ನೇ ಹುಟ್ಟುಹಬ್ಬಕ್ಕೆ ನಾನು ಶುಭಾಶಯಗಳನ್ನು ಕೋರುತ್ತೇನೆ. ದೇವರು ಯಾವಾಗಲೂ ನಿಮ್ಮ ಪರವಾಗಿರಲಿ ಮತ್ತು ನಮ್ಮ ರಾಷ್ಟ್ರ



ವನ್ನು ಎತ್ತರಕ್ಕೆ ಕೊಂಡೊಯ್ಯಲು ನಿಮಗೆ ಶಕ್ತಿಯನ್ನು ನೀಡಲಿ. ಕಳೆದ 11 ವರ್ಷಗಳಲ್ಲಿ ನೀವು ನಮ್ಮ ರಾಷ್ಟ್ರದ ಚುಕ್ಕಾಣಿ ಹಿಡಿದಿದ್ದೀರಿ, ನೀವು ಸಾಮಾಜಿಕ, ಆರ್ಥಿಕ ಸ್ಥಿರತೆ ಮತ್ತು ಭದ್ರತೆಯನ್ನು ಖಚಿತಪಡಿಸಿದ್ದೀರಿ' ಎಂದು ಗೌಡರು ಪ್ರಧಾನಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

ಕಳೆದ ಒಂದು ದಶಕದಲ್ಲಿ ದೇಶದಲ್ಲಿ ಮನಸ್ಥಿತಿ ಬದಲಾವಣೆಯಾಗಿದೆ. ಈ ರಾಷ್ಟ್ರವು ಶ್ರೀಮಂತ ಪ್ರತಿಭೆಗಳನ್ನು ಹೊಂದಿದೆ ಎಂದು ನೀವು ಸಾಬೀತು ಪಡಿಸಿದ್ದೀರಿ ಎಂದು ಕೊಂಡಾಡಿದ್ದಾರೆ.

# ಪ್ಲಾಸ್ಟಿಕ್ ಬಳಕೆ- ಮಾರಾಟ ಅಪರಾಧ



• ಪ್ರಜೋದಯ ವರದಿ

**ಹಾಸನ:** ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು, ಸ್ವಚ್ಛ ಭಾರತ್ ಮಿಷನ್ (ನಗರ), ಜಿಲ್ಲಾಡಳಿತ, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಸನ ಮಹಾನಗರ ಪಾಲಿಕೆ ವತಿಯಿಂದ ಸ್ವಚ್ಛತಾ ಹೀ ಸೇವಾ ಅಭಿಯಾನ ಅಂಗವಾಗಿ ನಗರದ ಕಟ್ಟಿನಕೆರೆ ಮಾರುಕಟ್ಟೆಯಲ್ಲಿ ಬುಧವಾರ ಸರ್ಕಾರದ ಆದೇಶದಂತೆ ಏಕ ಬಳಕೆ ಪ್ಲಾಸ್ಟಿಕ್ ಸಂಪೂರ್ಣ ನಿಷೇಧದ ಕುರಿತು ಪ್ಲಾಸ್ಟಿಕ್ ಬಳಕೆ ಮತ್ತು ಮಾರಾಟ ಅಪರಾಧ, ನಿಯಮಗಳ ಉಲ್ಲಂಘನೆಗೆ ದಂಡ ವಿಧಿಸುವ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಮಹಾಪೌರರಾದ ಹೇಮಲತಾ ಕಮಲ್ ಕುಮಾರ್ ಚಾಲನೆ ನೀಡಿದರು.

ಇದೇ ವೇಳೆಯಲ್ಲಿ ಬಟ್ಟೆ ಬ್ಯಾಗ್ ವಿತರಣೆ ಹಾಗೂ ಸ್ಟಿಕರ್ ಅಂಟಿಸುವ ಮೂಲಕ ಜಾಗೃತಿ ಮೂಡಿಸಲಾಯಿತು. ಸೆ. 17 ರಿಂದ ಅಕ್ಟೋಬರ್ 2 ವರೆಗೆ ಹಾಸನದ ಮಹಾನಗರ ಪಾಲಿಕೆಯ ವಿವಿಧ ವಾರ್ಡ್‌ಗಳಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ನಿರಂತರವಾಗಿ ಜರುಗಲಿದೆ.

ಮಹಾನಗರಪಾಲಿಕೆಯ ಆಯುಕ್ತ ಕೃಷ್ಣಮೂರ್ತಿ, ಪ್ರಭಾರಿ ಪರಿಸರ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಕವಿತಾ, ರಾಷ್ಟ್ರ ಪ್ರಶಸ್ತಿ ವಿಜೇತರಾದ ಬಿ.ಟಿ. ಮಾನವ ಹಾಗೂ ಮಹಾ ನಗರ ಪಾಲಿಕೆ ಆರೋಗ್ಯ ನಿರೀಕ್ಷಕರು, ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಕೆ.ಡಿ.ಪಿ. ಸಭೆ ಮುಂದೂಡಿಕೆ

• ಪ್ರಜೋದಯ ವರದಿ

**ಹಾಸನ:** ಕಂದಾಯ ಸಚಿವರು ಹಾಗೂ ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾದ ಕೃಷ್ಣ ಬೈರೇಗೌಡ ರವರ ಅಧ್ಯಕ್ಷತೆಯಲ್ಲಿ ಹಾಸನ ಜಿಲ್ಲೆಯ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (20 ಅಂಶಗಳ ಕಾರ್ಯಕ್ರಮವು ಸೇರಿದಂತೆ), 2025-26ನೇ ಸಾಲಿನ ಆಗಸ್ಟ್-2025ರ ಅಂತ್ಯಕ್ಕೆ ಕೆ.ಡಿ.ಪಿ ಪ್ರಗತಿ ಪರಿಶೀಲನಾ ಸಭೆಯನ್ನು ಸೆ.19 ರಂದು ಬೆಳಿಗ್ಗೆ.10 ಗಂಟೆಗೆ ಹಾಸನ ಜಿಲ್ಲಾ ಪಂಚಾಯಿತಿಯ ಹೊಯ್ಸಳ ಸಭಾಂಗಣದಲ್ಲಿ ನಿಗಧಿಪಡಿಸಲಾಗಿತ್ತು.

ಆದರೆ ಕಾರಣಾಂತರದಿಂದ ಸದರಿ ಸಭೆಯನ್ನು ಮುಂದೂಡಲಾಗಿದ್ದು, ಸೆ.23 ರಂದು ಬೆ.10.30 ಗಂಟೆಗೆ ನಿಗಧಿಪಡಿಸಲಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ಆರ್. ಪೂರ್ಣಿಮಾ ತಿಳಿಸಿದ್ದಾರೆ.

# ಸಮಾಜದ ಎಲ್ಲ ಸ್ಥರಗಳಲ್ಲಿ ವಿಶ್ವಕರ್ಮರ ಕೊಡುಗೆ ಅನನ್ಯ

• ಪ್ರಜೋದಯ ವರದಿ

**ಹೊಳೆನರಸೀಪುರ:** ಸಮಾಜದ ಎಲ್ಲ ಸ್ಥರಗಳಲ್ಲಿ ವಿಶ್ವಕರ್ಮರ ಕೊಡುಗೆ ಸಹಕಾರಿಯಾಗಿವೆ ಎಂದು ನಿವೃತ್ತ ಉಪನ್ಯಾಸಕ ಎಚ್.ಎಸ್.ಪ್ರಭು ಶಂಕರ್ ತಿಳಿಸಿದರು.

ಪಟ್ಟಣದ ತಾಲ್ಲೂಕು ಕಚೇರಿಯಲ್ಲಿ ನಡೆಸಿದ ವಿಶ್ವಕರ್ಮ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸೃಷ್ಟಿ ದೇವತೆಯ ಅಮೂರ್ತ ರೂಪವೇ ವಿಶ್ವಕರ್ಮ ದೇವರು. ಸಮಾಜಕ್ಕೆ ಪಂಚ ಕಸುಬುಗಳ ಮೂಲಕ ವಿಶ್ವಕರ್ಮ ಸಮುದಾಯದ ಜನಾಂಗ ಕೊಡುಗೆಯಾಗಿದ್ದಾರೆ. ಯಾವುದೇ ಗ್ರಾಮದಲ್ಲಿ ಒಂದೆರಡು ಮನೆಗಳು ವಿಶ್ವಕರ್ಮಿಗಳು ಇಲ್ಲದಿದ್ದರೆ ಆ ಗ್ರಾಮದ ಏಳಿಗೆ ಕಷ್ಟಸಾಧ್ಯವಾಗುತ್ತದೆ ಎಂದರು.

ವಿಶ್ವಕರ್ಮ ಪರಬ್ರಹ್ಮರು ದೇವತೆಗಳ ಇಂಜಿನಿಯರ್ ಇದ್ದಂತೆ. ಮರ,



ಲೋಹ, ಶಿಲ್ಪ, ಚಿನ್ನಾಭರಣ ಹಾಗೂ ಕಬ್ಬಿಣ ಸೇರಿದಂತೆ ಪಂಚ ಕಸುಬುಗಳಿಂದ ಜನ ಜೀವನದಲ್ಲಿ ಹಾಸುಹೊಕ್ಕಾಗಿದ್ದಾರೆ. ಬ್ರಾಹ್ಮಣ್ಯಕವನ್ನು ಪಾಲಿಸುವ ಪೌರಾಣಿಕ ಹಿನ್ನಲೆಯನ್ನು ಹೊಂದಿದವರು. ಪ್ರಸ್ತುತ ಸಮಾಜದಲ್ಲಿ ಎಲ್ಲವೂ ಆಧುನೀಕರಣತೆಯ ಪ್ರಭಾವ ಕಸುಬುಗಳ ಪಾತ್ರ ವಿಸ್ತಾರವಾಗಿದೆ. ಆದರೂ ಇತ್ತೀಚೆಗೆ ಕಟ್ಟಿದ ಸೇತುವೆಗಳು, ಕಟ್ಟಡಗಳು ಕೆಲವೇ ವರ್ಷದಲ್ಲಿ ಹಾಳಾಗುತ್ತಿವೆ. ಆದರೆ ಸಾಹಸ್ರಾರು ವರ್ಷಗಳ ಹಿಂದೆ ನಿರ್ಮಿಸಿದ ಜಗತ್ಪ್ರಸಿದ್ದ ದೇವಾಲಯಗಳು ಇಂದಿಗೂ ಜನರನ್ನು ಚಕಿತಗೊಳಿಸಿವೆ. ಇದು ಈ ಜನಾಂಗದ ಹೆಗ್ಗಳಿಕೆಗೆ ಪಾತ್ರವಾಗಿವೆ. ಸರ್ಕಾರ ಹಾಗೂ ಸಮಾಜದಿಂದ ಇನ್ನೂ ಹೆಚ್ಚಿನ ಬೆಂಬಲ ದೊರೆಯಬೇಕು ಎಂದರು.

ತಾಪಂ ಇಒ ಮಾತನಾಡಿ, ಸಮಾಜಕ್ಕೆ ನಾವು ಮಾಡುವ ಕೆಲಸಗಳೇ ಅತ್ಯಂತ ಸ್ಮರಣೀಯವಾಗಿರುತ್ತವೆ. ಅಲ್ಪಸಂಖ್ಯಾತರಾಗಿರುವ ಕಾರಣ ಸರ್ಕಾರ ವಿಶ್ವಕರ್ಮ ಸಮುದಾಯದ ಅಭ್ಯುದಯ ಬಯಸಿ ಸಾಕಷ್ಟು ಯೋಜನೆಗಳನ್ನು ಅನುಷ್ಠಾನಪಡಿಸಿದೆ. ಇದೀಗ ಜಾತಿಗಣತಿ ನಡೆಸಲಾಗುವುದು. ತಮ್ಮ ಸಮುದಾಯದ ಪ್ರತಿ ಕುಟುಂಬದವರು ಸಮಗ್ರ ಮಾಹಿತಿ ನೀಡುವ ಮೂಲಕ ಸವಲತ್ತು ಹೊಂದಲು ಕಾಳಜಿ ವಹಿಸಬೇಕು. ಜಾತಿ ಮತ್ತು ಉಪಜಾತಿ ಸೂಕ್ತವಾಗಿ ನಮೂದಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕೃಷ್ಣಮೂರ್ತಿ, ವಿಶ್ವಕರ್ಮ ಸಮಾಜದ ತಾಲ್ಲೂಕು ಅಧ್ಯಕ್ಷ ಗಂಗಾಧರಾಚಾರ್, ಸಮುದಾಯದ ಮುಖಂಡರಾದ ರೇವಣ್ಣಾಚಾರ್, ಮಲ್ಲೇಶಾಚಾರ್ ಇತರರು ಉಪಸ್ಥಿತರಿದ್ದರು.

# ಗಾಂಜಾ ಮಾರಾಟ: ಆರೋಪಿ ಸೆರೆ



**ಸಕಲೇಶಪುರ: ನಗರ ಠಾಣಾ ವ್ಯಾಪ್ತಿಯ ಆನೆಮಹಲ್ ಗ್ರಾಮದಲ್ಲಿ ಕಾರಿನಲ್ಲಿ ಗಾಂಜಾ ಸೊಪ್ಪನ್ನು ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿರುವ ಘಟನೆ ಬುಧವಾರ ನಡೆದಿದೆ.**

**ಸಕಲೇಶಪುರ ನಗರ ಠಾಣೆಯ ಇನ್ಸ್‌ಪೆಕ್ಟರ್ ಎಂ.ಜಗದೀಶ್ ಅವರ ತಂಡ ದಾಳಿ ಮಾಡಿ ಸುಮಾರು 750 ಗ್ರಾಂ ಗಾಂಜಾವನ್ನು ಮತ್ತು ಒಬ್ಬ ಆರೋಪಿಯನ್ನು ವಶಪಡಿಸಿಕೊಂಡಿದ್ದಾರೆ. ದಾಳಿಯಲ್ಲಿ ಸಬ್ ಇನ್ಸ್‌ಪೆಕ್ಟರ್ ಮಹೇಶ್, ಕೈ ಸಿಬ್ಬಂದಿಗಳಾದ ಪೃಥ್ವಿ, ಶ್ರೀಧರ್, ಚಾಲಕ ಮಧು ಮುಂತಾದವರು ಹಾಜರಿದ್ದರು.**

# ಕಾಡಾನೆ ದಾಳಿಯಿಂದ ಸ್ವಲ್ಪದರಲ್ಲೇ ಪಾರು

• ಪ್ರಜೋದಯ ವರದಿ

**ಹೆತ್ತೂರು:** ಮಲೆನಾಡಿನ ಭಾಗದಲ್ಲಿ ಪ್ರತಿನಿತ್ಯ ಕಾಡಾನೆಯಿಂದ ರೈತರು ಬೆಳೆದ ಬೆಳೆಗಳು, ಮಲೆನಾಡ ಜನರ ಪ್ರಾಣವನ್ನು ರಕ್ಷಿಸಿಕೊಳ್ಳಲು ಹರಸಾಹಸ ಪಡುವಂತಾಗಿದೆ. ಅದರಲ್ಲೂ ಹೆತ್ತೂರು ಹೋಬಳಿಯ ಕಲ್ಲು ತೋಟದಲ್ಲಿ ಸಮೀಪ ಮರಿಗಳೊಂದಿಗೆ ಬೀಡು ಬಿಟ್ಟಿರುವ ನಾಲ್ಕು ಕಾಡಾನೆಗಳು ಪ್ರತಿನಿತ್ಯ ಒಂದಲ್ಲ ಒಂದು ಅವಾಂತರ ಮಾಡುತ್ತಿವೆ.

ಕಾಫಿ ತೋಟಕ್ಕೆ ಹೋಗಿದ್ದ ಕಲ್ಲು ತೋಟದ ಪೃಥ್ವಿರಾಜ್ ಮೇಲೆ ಏಕಾಏಕಿ ಎರಗಿ ಬಂದ ಕಾಡನೆಯಿಂದ ತಪ್ಪಿಸಿಕೊಂಡು ಚಿಕ್ಕ ಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಈ ಕಾಡನೆ ಗುಂಪಿನಲ್ಲಿ ಮರಿ ಆನೆ ಇರುವುದರಿಂದ ತನ್ನ ಮರಿಯ ರಕ್ಷಣೆಗಾಗಿ ಯಾರೇ ಮನುಷ್ಯರು ಕಂಡರೂ ದಾಳಿ ಮಾಡುವ ಪ್ರವೃತ್ತಿಯನ್ನು ಹೊಂದಿದೆ. ಅಲ್ಲದೆ ಇವು ಬೇರೆ ಕಡೆಗೆ ಹೋಗದೆ ಕಲ್ಲು ತೋಟದ ಆಸುಪಾಸಿನಲ್ಲಿ ಬೀಡು ಬಿಟ್ಟಿವೆ. ಇದರಿಂದ ಕಾಫಿ ತೋಟದ ಕೆಲಸಕ್ಕೆ ಹೋಗಲು ಮಾಲೀಕರು ಮತ್ತು ಕಾರ್ಮಿಕರು ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ.



ಮಲೆನಾಡಿನಲ್ಲಿ ಕಾಡಾನೆಗಳ ಹಾವಳಿಗೆ ಈ ವಾರದಲ್ಲಿ ಮನೆ, ಕೊಟ್ಟಿಗೆ, ಜನ ಸೇರಿದಂತೆ ಇದು 3 ನೇ ಪ್ರಕರಣ ಆಗಿದ್ದು ಬೆಳೆಗಾರರು ಆತಂಕದಲ್ಲಿ ಜೀವನ ನಡೆಸುವಂತಾಗಿದೆ. ಅರಣ್ಯ ಇಲಾಖೆಯವರು ಗಮನಹರಿಸಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

# ಇದು ಹೊಸ ಭಾರತ, ಶತ್ರು ದೇಶಕ್ಕೆ ನುಗ್ಗಿ ಹೊಡೆಯುತ್ತದೆ

• ಪ್ರಜೋದಯ ವರದಿ

**ಮಧ್ಯಪ್ರದೇಶ:** ಪಾಕಿಸ್ತಾನದ ಭಯೋತ್ಪಾದಕರು ನಮ್ಮ ಸಹೋದರಿಯರು ಮತ್ತು ಹೆಣ್ಣುಮಕ್ಕಳ ಸಿಂಧೂರವನ್ನು ಅಳಿಸಿದ್ದರು. ಅವರಿಗೆ ನಮ್ಮ ಸೇನೆ ತಕ್ಕ ಶಾಸ್ತಿ ಮಾಡಿತು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಅವರು, ಮಹಾರಾಜ ಭೋಜ್ ಅವರ ಧೈರ್ಯವು ರಾಷ್ಟ್ರೀಯ ಹೆಮ್ಮೆಯನ್ನು ರಕ್ಷಿಸಲು ಸದೃಢವಾಗಿ ನಿಲ್ಲಲು ನಮಗೆ ಕಲಿಸುತ್ತದೆ. ಮಹರ್ಷಿ ದಧೀಚಿಯವರ ತ್ಯಾಗವು ಮಾನವೀಯತೆಗೆ ಸೇವೆ ಸಲ್ಲಿಸುವ ಸಂಕಲ್ಪವನ್ನು ನಮಗೆ ನೀಡುತ್ತದೆ. ಈ ಪರಂಪರೆಯಿಂದ ಪ್ರೇರಿತರಾಗಿ, ಇಂದು ದೇಶವು ಭಾರತ ಮಾತೆಯ ಭದ್ರತೆಗೆ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ನಮ್ಮ ಧೈರ್ಯಶಾಲಿ



ಸೈನಿಕರು ಪಾಕಿಸ್ತಾನವನ್ನು ಕಣ್ಣು ಮಿಟುಕಿಸುವುದರೊಳಗೆ ಮಂಡಿಯೂರಿಸಿದರು. ನಿನ್ನೆಯಷ್ಟೇ, ರಾಷ್ಟ್ರ ಮತ್ತು ಜಗತ್ತು ಮತ್ತೊಬ್ಬ ಪಾಕಿಸ್ತಾನಿ ಭಯೋತ್ಪಾದಕ ಅಳುತ್ತಾ ತನ್ನ ದುಃಸ್ಥಿತಿಯನ್ನು ವಿವರಿಸುವುದನ್ನು ಕಂಡಿದೆ ಎಂದರು.

ಇದು ಹೊಸ ಭಾರತ, ಯಾರ ಪರಮಾಣು ಬೆದರಿಕೆಗಳಿಗೂ ಹೆದರುವುದಿಲ್ಲ. ಅದು ಶತ್ರು ದೇಶಕ್ಕೆ ನುಗ್ಗಿ ಹೊಡೆಯುತ್ತದೆ. ಇಂದು ಸೆ.17 ಮತ್ತೊಂದು ಐತಿಹಾಸಿಕ ಸಂದರ್ಭ. ಈ ದಿನದಂದು ದೇಶವು ಸರ್ದಾರ್ ಪಟೇಲ್ ಅವರ ಉಕ್ಕಿನ ಇಚ್ಛಾಶಕ್ತಿಯ ಉದಾಹರಣೆಯನ್ನು ಕಂಡಿತು. ಭಾರತೀಯ ಸೇನೆಯು ಹೈದರಾಬಾದ್ ಅನ್ನು ಹಲವಾರು ದೌರ್ಜನ್ಯ ಗಳಿಂದ ಮುಕ್ತಗೊಳಿಸಿತು. ಅದರ ಹಕ್ಕುಗಳನ್ನು ರಕ್ಷಿಸುವ ಮೂಲಕ ಭಾರತದ ಹೆಮ್ಮೆಯನ್ನು ಪುನಃಸ್ಥಾಪಿಸಿತು. ದೇಶಕ್ಕೆ ಈ ಪ್ರಮುಖ ಸಾಧನೆ ಮಾಡಿ ದಶಕಗಳು ಕಳೆದಿವೆ. ಆದರೆ ಯಾರೂ ಅದನ್ನು ನೆನಪಿಸಿ ಕೊಳ್ಳಲಿಲ್ಲ. ನೀವು ನನಗೆ ಈ ಅವಕಾಶವನ್ನು ನೀಡಿದ್ದೀರಿ ಎಂದರು.

ಇಂದಿನ ಕಾರ್ಯಕ್ರಮವನ್ನು ಮಹಿಳಾ ಸಬಲೀಕರಣಕ್ಕಾಗಿ ಎಚ್ಚರಿಕೆ ಯಿಂದ ಪರಿಗಣಿಸಲಾಗಿದೆ. ಈ ಕಾರ್ಯಕ್ರಮ ಧಾರ್‌ನಲ್ಲಿ ನಡೆಯುತ್ತಿದೆ, ಆದರೆ ಇದು ಇಡೀ ರಾಷ್ಟ್ರಕ್ಕಾಗಿ. ಇದು ದೇಶಾದ್ಯಂತ ನಡೆಯುತ್ತಿದೆ, ಇಡೀ ರಾಷ್ಟ್ರದ ತಾಯಂದಿರು ಮತ್ತು ಸಹೋದರಿಯರಿಗಾಗಿ ಎಂದು ಮೋದಿ ಹೇಳಿದರು.

# ಮತ್ತೆ ಮಳೆ ಚುರುಕು: ರಾಜ್ಯದಲ್ಲಿ 14 ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್



ಬೆಂಗಳೂರು: ರಾಜ್ಯದಲ್ಲಿ ಮತ್ತೆ ಮಳೆ ಚುರುಕಾಗಿದೆ. 14 ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಬೆಂಗಳೂರಿನಲ್ಲೂ ಮೋಡಕವಿದ ವಾತಾವರಣ ವಿದ್ದು, ಅಲ್ಲಲ್ಲಿ ಮಳೆಯಾಗಿದೆ. ಮೈಸೂರು, ಮಂಡ್ಯ, ಕೊಡಗು, ಹಾಸನ, ಯಾದಗಿರಿ, ವಿಜಯಪುರ, ರಾಯಚೂರು, ಕಲಬುರಗಿ ಮತ್ತು ಬೀದರ್, ಬೆಳಗಾವಿ, ಬಾಗಲಕೋಟೆ, ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡಕ್ಕೆ ಯೆಲ್ಲೋ ಅಲರ್ಟ್‌ನ್ನು ಘೋಷಿಸಲಾಗಿದೆ.

ಧಾರವಾಡ, ಗದಗ, ಹಾವೇರಿ, ಬೆಂಗಳೂರು ಗ್ರಾಮಾಂತರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರ ದುರ್ಗ, ದಾವಣಗೆರೆ, ಕೋಲಾರ, ರಾಮನಗರ, ಶಿವಮೊಗ್ಗ, ಹಾಸನದಲ್ಲಿ ಮಳೆಯಾಗಲಿದೆ.

## ವಿಶ್ವಕರ್ಮ ಭಾರತೀಯ ಸಂಸ್ಕೃತಿಯ ಪ್ರತೀಕ: ಶಾಸಕ ಸಿಮೆಂಟ್ ಮಂಜು

# ಸಮಾಜಕ್ಕೆ ವಿಶ್ವಕರ್ಮರ ಕೊಡುಗೆ ಅಪಾರ

• ಪ್ರಜೋದಯ ವರದಿ

**ಸಕಲೇಶಪುರ:** ವಿಶ್ವಕರ್ಮ ಸಮುದಾಯದವರು ಶ್ರಮ ಜೀವಿಗಳಾಗಿದ್ದು, ಸಮಾಜಕ್ಕೆ ಅವರ ಕೊಡುಗೆ ಅನನ್ಯವಾದುದು ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಮತ್ತು ತಾಲೂಕು ವಿಶ್ವಕರ್ಮ ಸಮಾಜದ ವತಿಯಿಂದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಕರ್ಮ ಸಮಾಜಕ್ಕೆ ತನ್ನದೇ ಆದ ಚಾರಿತ್ರಿಕ ಹಿನ್ನೆಲೆ ಇದೆ. ವೇದಗಳ ಕಾಲದಿಂದಲೂ ಸಮಾಜಕ್ಕೆ ಇವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ವಿಶ್ವಕರ್ಮ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದೆ. ಅನೇಕತೆಯಲ್ಲಿ ಏಕತೆ ಹೊಂದಿರುವುದೇ ನಮ್ಮ ವೈಶಿಷ್ಟ್ಯವಾಗಿದೆ. ಸಮಾಜದಲ್ಲಿ ಅಭಿವೃದ್ಧಿ ಮತ್ತು



ಬದಲಾವಣೆಯು ಅನಿವಾರ್ಯ. ಆ ನಿಟ್ಟಿನಲ್ಲಿ ಉತ್ತಮ ಬದುಕು ಕಟ್ಟಿಕೊಳ್ಳಲು ಪ್ರಯತ್ನಿಸಬೇಕು. ನಿಗಮದಿಂದ ದೊರೆಯುವ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಜಗತ್ತಿಗೆ ಎಲ್ಲವನ್ನೂ ನೀಡಿದ ವಿಶ್ವಕರ್ಮರ ಕೊಡುಗೆ ಅಪಾರ. ವಿಶ್ವಕರ್ಮರು ಕುಲಕಸುಬು ಮಾಡುವುದರೊಂದಿಗೆ ಆರ್ಥಿಕವಾಗಿ ಸಬಲರಾಗಬೇಕು. ಸ್ವಾವಲಂಬಿ ಬದುಕು ನಡೆಸುವಂತಾಗಬೇಕು. ಅಜಂತಾ, ಎಲ್ಲೋರಾ ದೇವಾಲಯಗಳು, ಬೇಲೂರು ಹಳೇಬೀಡು ಶಿಲ್ಪ ಕಲೆಗಳು ವಿಶ್ವ ಪ್ರಸಿದ್ಧಿ ಪಡೆದಿವೆ. ಇದಕ್ಕೆ ಅಲ್ಲಿನ ಕೆತ್ತನೆ ಹಾಗೂ ಶಿಲ್ಪ ಕಲೆಗಳೇ ಸಾಕ್ಷಿ. ಆ ನಿಟ್ಟಿನಲ್ಲಿ ವಿಶ್ವಕರ್ಮರ ಕ್ರಿಯಾಶೀಲತೆಯನ್ನು ಕಾಣಬಹುದಾಗಿದೆ. ವಿಶ್ವಕರ್ಮರ ಕೆಲಸವು ಸ್ಥಳೀಯ ಉತ್ಪನ್ನಗಳನ್ನು, ಸಂಸ್ಕೃತಿಯನ್ನು ಮತ್ತು ಪರಂಪರೆಯನ್ನು ಉತ್ತೇಜಿಸಲು ಸಹಾಯ ಮಾಡುತ್ತದೆ. ಕರಕುಶಲಕರ್ಮಿಗಳ ಕೌಶಲ್ಯಗಳನ್ನು ಹೆಚ್ಚಿಸಲು ಮತ್ತು ಅವರನ್ನು ಬೆಂಬಲಿಸಲು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ 'ಪಿಎಂ ವಿಶ್ವಕರ್ಮ ಯೋಜನೆ'ಯನ್ನು ಪ್ರಾರಂಭಿಸಿದೆ ಯೋಜನೆಯ ಸದುಪಯೋಗ ಪಡೆದುಕೊಳ್ಳುವಂತೆ ಅವರು ಕರೆ ನೀಡಿದರು.

ವಿಶ್ವಕರ್ಮ ಸಮಾಜದ ತಾಲ್ಲೂಕು ಅಧ್ಯಕ್ಷ ಶ್ರೀನಿವಾಸ್ ಮಾತನಾಡಿ, ತಾಲೂಕಿನಲ್ಲಿ ವಿಶ್ವಕರ್ಮ ಸಮುದಾಯದ ಸುಮಾರು 5 ಸಾವಿರಕ್ಕಿಂತ ಹೆಚ್ಚು ಜನರಿದ್ದೇವೆ. ಕಳೆದ 30 ವರ್ಷಗಳಿಂದ ಹಲವಾರು ಸರ್ಕಾರಗಳಿಗೆ ಜನಪ್ರತಿನಿಧಿಗಳಿಗೆ ವಿಶ್ವಕರ್ಮ ಭವನ ನಿರ್ಮಿಸುವಂತೆ ಮನವಿ ಮಾಡಿದ್ದರು ಪ್ರಯೋಜನವಾಗಿಲ್ಲ ಎಂದು ಬೇಸರ ಹೊರಹಾಕಿದರಲ್ಲದೆ, ಈಗಿರುವ ಶಾಸಕರು ವಿಶ್ವಕರ್ಮ ಭವನ ನಿರ್ಮಾಣಕ್ಕೆ ಮುಂದಾಗುವಂತೆ ಮನವಿ ಮಾಡಿದರು.

ಪುರಸಭಾ ಅಧ್ಯಕ್ಷೆ ಜ್ಯೋತಿ ರಾಜ್‌ಕುಮಾರ್ ಮಾತನಾಡಿ, ಸಮುದಾಯದ ಜನರ ಸಂಖ್ಯೆ ಕಡಿಮೆ ಇದೆ ಎಂದು ಈ ಹಿಂದೆ ಅದ್ದೂರಿಯಾಗಿ ನಡೆಸಿದ ವಿಶ್ವಕರ್ಮ ಜಯಂತಿ ಕಾರ್ಯಕ್ರಮವನ್ನು ನಿಲ್ಲಿಸುವುದು ಬೇಡ. ಮುಂದಿನ ದಿನಗಳಲ್ಲಿ ವಿಶ್ವಕರ್ಮ ಜಯಂತಿಯನ್ನು ಮತ್ತಷ್ಟು ಅರ್ಥಪೂರ್ಣವಾಗಿ ಅದ್ದೂರಿಯಾಗಿ ಆಚರಿಸುವಂತೆ ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಉಪ ತಹಸೀಲ್ದಾರ್ ಮೋಹನ್‌ಕುಮಾರ್, ತಾಲ್ಲೂಕು ಪಂಚಾಯಿತಿ ಸಹಾಯಕ ನಿರ್ದೇಶಕ ಹರೀಶ್, ವಿಶ್ವಕರ್ಮ ಸಮಾಜದ ಮಹಿಳಾ ಘಟಕದ ಅಧ್ಯಕ್ಷೆ ಕಮಲ ಸಂಪತ್‌ಕುಮಾರ್, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆ ಶಾರದ ಗುರುಮೂರ್ತಿ, ನಿವೃತ್ತ ತಹಸೀಲ್ದಾರ್ ಅಣ್ಣೆಗೌಡ, ಸಿದ್ದೇಶ್, ಸಮುದಾಯದ ರೇಣುಕ ಪ್ರಸಾದ್, ತಾಲ್ಲೂಕು ಚುನಾವಣಾ ಶಿರಸ್ತೆದಾರ್ ಶ್ವೇತಾ, ಜಾನೇಕೆರೆ ಪರಮೇಶ್ ಉಪಸ್ಥಿತರಿದ್ದರು.

# ಹಿರಿಯ ಪತ್ರಕರ್ತರಿಗೆ ಭದ್ರತೆ ಸಿಕ್ಕಿಲ್ಲ




• ಪ್ರಜೋದಯ ವರದಿ

**ಹೊಳೆನರಸೀಪುರ:** ಮಾಧ್ಯಮ ಉದ್ಯಮವಾಗಿ ಬದಲಾಗಿದೆಯಾದರೂ, ಸಂವಿಧಾನಾತ್ಮಕ ಚೌಕಟ್ಟಿನಿಂದ ಹೊರತಾಗಿರುವ ಪತ್ರಿಕಾರಂಗದಲ್ಲಿ ತೊಡಗಿಸಿಕೊಂಡಿರುವ ಹಿರಿಯ ಪತ್ರಕರ್ತರ ಜೀವನಕ್ಕೆ ಭದ್ರತೆ ಸಿಕ್ಕಿಲ್ಲ ಎಂದು ಕಾರ್ಯನಿರತ ಪತ್ರಕರ್ತರ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ರವಿನಾಕಲಗೂಡು ಹೇಳಿದರು.

ಪತ್ರಿಕಾ ದಿನಾಚರಣೆಯಲ್ಲಿ ಮಾತನಾಡಿ, ನಿಜವಾದ ಪತ್ರಕರ್ತರ‍್ಯಾರೂ ಯಾರನ್ನೂ ಬ್ಲಾಕ್‌ಮೇಲ್ ಮಾಡಲ್ಲ. ನಿಷ್ಠೆಯಿಂದ, ಪ್ರಾಮಾಣಿಕವಾಗಿ ಪತ್ರಿಕೆಗೆ ಶ್ರಮಿಸುವವರು ಸಮಾಜದಲ್ಲಿ ಒಳಿತಾಗಿದ್ದಾರೆ ಎಂದರು.

ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಕೆ.ಎಚ್.ವೇಣುಕುಮಾರ್ ಮಾತನಾಡಿ, ಪತ್ರಕರ್ತರ ದುಡಿಮೆ ವರ್ಷವಿಡಿ ಇರುತ್ತದೆ. ಹಾಗಾಗಿ ಪತ್ರಿಕಾ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗಿರಲ್ಲ. ನಿತ್ಯ ಆಚರಣೆಯಂತೆಯೇ ತೊಡಗಿಸಿಕೊಳ್ಳುತ್ತಾರೆ. ತಾಲ್ಲೂಕಿನ ಪತ್ರಕರ್ತರ ಕ್ಷೇಮ ಬಯಸಿ ಜಿಲ್ಲಾ ಮತ್ತು ರಾಜ್ಯ ಸಂಘಗಳು ಎಂದಿಗೂ ಪ್ರೋತ್ಸಾಹಿಸುತ್ತದೆ ಎಂದು ಹೇಳಿದರು.

ರಾಷ್ಟ್ರೀಯ ಪತ್ರಿಕಾ ಮಂಡಳಿ ಸದಸ್ಯ ಕೆ.ಆರ್.ಮಂಜುನಾಥ್, ಪತ್ರಕರ್ತ ಜಿ.ಪ್ರಕಾಶ್, ತಹಸೀಲ್ದಾರ್ ವೈ.ಎಂ.ರೇಣುಕುಮಾರ್, ಜಿಲ್ಲಾ ಕಾರ್ಯದರ್ಶಿ ಶಶಿಧರ್ ಹಾಗೂ ಪುರಸಭಾ ಅಧ್ಯಕ್ಷ ಎಚ್.ಕೆ.ಪ್ರಸನ್ನ ಉಪಸ್ಥಿತರಿದ್ದರು.

C M Y K C M Y K C M Y K C M Y K

